# ಹಾಡುತ್ತಾ ನಲಿ, ಕಲಿಯುತ್ತಾ ಬೆಳಿ!

## ಚಿಣ್ಣರ ಬೆಳವಣಿಗೆಯ ಪ್ರಚೋದನೆಗಾಗಿ ಪದ್ಯಗಳ ಸಂಕಲನ



# ಹಾಡುತ್ತಾ ನಲಿ

# ಕಲಿಯುತ್ತಾ ಬೆಳಿ!

## ಚಿಣ್ಣರ ಬೆಳವಣಿಗೆಯ ಪ್ರಚೋದನೆಗಾಗಿ ಪದ್ಯಗಳ ಸಂಕಲನ.

**೦-6 ವರ್ಷದ ಮಕ್ಕಳ ಬೆಳವಣಿಗೆ, ಮಾನಸಿಕ ಆರೋಗ್ಯ ಮತ್ತು ಸುರಕ್ಷತೆಯ ಸೇವಾ ಯೋಜನೆ, ಮಕ್ಕಳ ಮತ್ತು ಕಿಶೋರ ಮನೋವೈದ್ಯಕೀಯ ವಿಭಾಗ**

**ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ, ಹೊಸುರು ರಸ್ತೆ,**

**ಬೆಂಗಳೂರು – 560029**

**ಸಹಯೋಗ:**

**ಸಮಗ್ರ ಶಿಶು ಅಭಿವೃದ್ದಿ ಯೋಜನೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ**

**ಬೆಂಬಲ:**

**UNICEF**

**ಮಕ್ಕಳು ಮಾತನಾಡುವ ಮುನ್ನ ಹಾಡುತ್ತಾರೆ,**

**ಬರೆಯುವ ಮುನ್ನ ಚಿತ್ರ ಬಿಡಿಸುತ್ತಾರೆ,**

**ನಿಲ್ಲಲು ಕಲಿತ ಕೂಡಲೇ ಕುಣಿಯಲು ಪ್ರಾರಂಭ ಮಾಡುತ್ತಾರೆ.**

**ಕಲೆಯೇ ಮಾನವನ ಅಭಿವ್ಯಕ್ತಿಗೆ ಮೂಲಭೂತವಾದದ್ದು.**

**– ಫಿಲಿಸಿಯಾ ರಶಾದ್**

# ಕೃತಜ್ಞತೆಗಳು

ಹಾಡುತ್ತಾ ನಲಿ, ಕಲೆಯುತ್ತಾ ಬೆಳಿ! ಚಿಣ್ಣರ ಬೆಳವಣಿಗೆಯ ಪ್ರಚೋದನೆಗಾಗಿ ಪದ್ಯಗಳ ಸಂಕಲನವನ್ನು ಹೊರತರಲು ಕಾರಣರಾದವರಿಗೆ ವಂದನೆಗಳು.

ಈ ಪದ್ಯಗಳ ಸಂಕಲನವು ಕೆಳಗಿನ ಅಂಗನವಾಡಿಗಳ ಶಿಕ್ಷಕರು ಹಾಗೂ ಸಹಾಯಕಿಯರಿಂದ ಕೊಡುಗೆಗಳನ್ನು ಪಡೆದಿದೆ.

| ಕ್ರ. ಸಂ | ಅಂಗನವಾಡಿ ಕೇಂದ್ರ | ಅಂಗನವಾಡಿ ಶಿಕ್ಷಕರು |
|---|---|---|
| 1. | ವೀಣಾ ಬಿ. | ವಿನೋಬನಗರ – I |
| 2. | ಲಿಂಗರಾಜಮ್ಮ | ರಾಮಣ್ಣ ಗಾರ್ಡನ್ – I |
| 3. | ರಾಜಿ ಆರ್. | ರಾಮಣ್ಣ ಗಾರ್ಡನ್ – II |
| 4. | ಶಾಂತ ಹೆಚ್.ಪಿ. | ಎನ್.ಎಸ್. ಗಾರ್ಡನ್ |
| 5. | ರಾಜೇಶ್ವರಿ ಸಿ.ಎನ್. | ವೈ.ಎಂ. ಶಾಲೆ – I |
| 6. | ಶಾಂತ ಎಂ.ಎಸ್. | ಕುಂಬಾರಗುಂಡಿ |
| 7. | ಗಿರಿಜಮ್ಮ | ಹೆಚ್.ಕೆ.ಗಾರ್ಡನ್ |
| 8. | ಮಾಲತಿ ಎ. | ರಾಜಗೋಪಾಲ ಗಾರ್ಡನ್ |
| 9. | ದೀಪಾ ಎಸ್. | ವಿನೋಬನಗರ – II |
| 10. | ಕಮಲ ಎಂ. | ವೈ.ಎಂ. ಶಾಲೆ – II |
| 11. | ಕೆ. ಜಯಲಕ್ಷ್ಮೀ | ಗಂಗಾಧರನಗರ |
| 12. | ಉಮಾದೇವಿ | ಯಾರಬ್‌ನಗರ – I |
| 13. | ಲಲಿತಮ್ಮ | ಸರಬಂಡೆಪಾಳ್ಯ – I |
| 14. | ಸಾವಿತ್ರಮ್ಮ | ಹರಿಕಾಲೋನಿ – II |
| 15. | ಚಂದ್ರಕಲಾ | ಪ್ರಗತಿಪುರ – I & II |
| 16. | ಮಾಧವಿ ಸಿ. ಆರ್. | ಪ್ರಗತಿಪುರ – III |
| 17. | ಸೌಮ್ಯ | ಭವಾನಿನಗರ – II |
| 18. | ಮನು ಹೆಚ್.ಎಸ್. | ಜವಹರಲಾಲ್ ನೆಹರೂ ಸ್ಲಂ |
| 19. | ಎಲ್. ಗಿರಿಜ | ಹರಿಕಾಲೋನಿ – I |
| 20. | ಬಿ. ಆರ್. ನಾಂಚಾಲಮ್ಮ | ಅಂಬೇಡ್ಕರ್‌ನಗರ – I |
| 21. | ರಶ್ಮಿ ಡಿ.ಪಿ. | ಕಾಳಪ್ಪ ಬ್ಲಾಕ್ |
| 22. | ಮುನಿರತ್ನಮ್ಮ. ವಿ. ಎಮ್ | ಕಾವೇರಿನಗರ – II |
| 23. | ವನಿತಾ ಎಂ. | ಕಾಳಿದಾಸ ಲೇಔಟ್ |
| 24. | ಶಾಂತಮ್ಮ ಶಿವಲಿಂಗೇಗೌಡ | ದೋಬಿಘಾಟ್ – II |
| 25. | ಧನಲಕ್ಷ್ಮಿ ಕೆ. | ಶ್ರೀನಗರ – II |
| 26. | ಸುವರ್ಣಮ್ಮಾ | ವಿಲ್ಸನ್ ಗಾರ್ಡನ್ |
| 27. | ರಮಾಮಣಿ | ಸಿದ್ಧಾಪುರ – II |
| 28. | ಗಂಗಾಮಣಿ ಹೆಚ್.ಎಸ್. | ನಾರಾಯಣಪುರ |
| 29. | ಗಂಗಾದೇವಿ ಟಿ. | ಅರಸು ಕಾಲೋನಿ |
| 30. | ಗಾಯತ್ರಿ ಎ. | ಕಾವೇರಿ ನಗರ IV |

| | |
|---|---|
| ಸಹಕಾರ | ಬೆಂಗಳೂರು ದಕ್ಷಿಣ ವಲಯದ ಮಕ್ಕಳ ಅಭಿವೃದ್ಧಿ ಯೋಜನಾ ಅಧಿಕಾರಿಗಳು ಹಾಗೂ ಮೇಲ್ವಿಚಾರಕರು. |
| ಸಹಯೋಗ | ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ |
| ಬೆಂಬಲ | **UNICEF** |
| ಪರಿಕಲ್ಪನೆ ಹಾಗೂ ಅಭಿವೃದ್ಧಿ | ಡಾ॥ ಚೈತ್ರ ಜಿ ಕೃಷ್ಣ<br>ಯೋಜನಾ ಸಂಯೋಜಕರು<br>೦–6 ವರ್ಷದ ಮಕ್ಕಳ ಬೆಳವಣಿಗೆ, ಮಾನಸಿಕ ಆರೋಗ್ಯ ಮತ್ತು ಸುರಕ್ಷತೆಯ ಸೇವಾ ಯೋಜನೆ, ಮಕ್ಕಳ ಮತ್ತು ಕಿಶೋರ ಮನೋ ವೈಧ್ಯಕೀಯ ವಿಭಾಗ, **NIMHANS** |
| | ಡಾ॥ ಬಸವರಾಜ ವೀ ಜ್ಯೋತಿ<br>ಯೋಜನಾ ಅಧಿಕಾರಿ<br>೦–6 ವರ್ಷದ ಮಕ್ಕಳ ಬೆಳವಣಿಗೆ, ಮಾನಸಿಕ ಆರೋಗ್ಯ ಮತ್ತು ಸುರಕ್ಷತೆಯ ಸೇವಾ ಯೋಜನೆ, ಮಕ್ಕಳ ಮತ್ತು ಕಿಶೋರ ಮನೋ ವೈಧ್ಯಕೀಯ ವಿಭಾಗ, **NIMHANS** |
| | ಡಾ॥ ಶೆಖರ್ ಶೆಷಾದ್ರಿ<br>ಹಿರಿಯ ಪ್ರಾಧ್ಯಾಪಕರು,<br>ಅಸೋಸಿಯೇಟ್ ಡೀನ್, ಬಿಹೆವಿಯರಲ್ ಸೈನ್ಸಸ್,<br>ಮಕ್ಕಳ ಮತ್ತು ಕಿಶೋರ ಮನೋ ವೈಧ್ಯಕೀಯ ವಿಭಾಗ,<br>ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ(NIMHANS), |

# ಪುಸ್ತಕದ ಬಗ್ಗೆ ಎರಡು ಮಾತು

ಕಲಿಕೆ ಇದ್ದಲ್ಲಿ ಆಟವಿರಲೇಬೇಕು. ಈ ಆಟದ ಜೊತೆಗೆ ಹಾಡು ಮತ್ತು ಕುಣಿತವೂ ಸೇರಿದರೇ ಕಲಿಕೆಯ ಅನುಭವ ವೈಶಿಷ್ಟ್ಯಮಯವಾಗುವುದು ನೂರಕ್ಕೆ ನೂರರಷ್ಟು ನಿಜ. ಇಂತಹ ಒಂದು ಸಂಗತಿಯನ್ನು ಎತ್ತಿ ಹಿಡಿದು, ಕಾರ್ಯರೂಪಕ್ಕೆ ತರುವುದೇ ನಮ್ಮ ಈ ಯೋಜನೆ.

ಮಕ್ಕಳ ಮತ್ತು ಕಿಶೋರ ಮಾನಸಿಕ ಆರೋಗ್ಯ ವಿಭಾಗ, ನಿಮ್ಹಾನ್ಸ್ (NIMHANS) ಬೆಂಗಳೂರು, ಅವರು ಹಲವು ಸಮುದಾಯ ಆಧಾರಿತ ಮಕ್ಕಳ ಮತ್ತು ಕಿಶೋರರ ಮಾನಸಿಕ ಆರೋಗ್ಯದ ಹಲವು ಯೋಜನೆಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ಪೂರೈಸಿದೆ. ಹಾಗೇ ಈ ಬಾರಿಯೂ UNICEF ಸಹಯೋಗದೊಂದಿಗೆ 0–6 ವರ್ಷದ ಮಕ್ಕಳ ಬೆಳವಣಿಗೆ, ಮಾನಸಿಕ ಆರೋಗ್ಯ ಮತ್ತು ಸುರಕ್ಷತೆಯ ಸೇವಾ ಯೋಜನೆಯನ್ನು ಹಮ್ಮಿಕೊಂಡು ಬೆಂಗಳೂರು ದಕ್ಷಿಣ ವಲಯದಲ್ಲಿ ಒಟ್ಟು 30 ಅಂಗನವಾಡಿಗಳನ್ನು ಆಯ್ಕೆ ಮಾಡಿಕೊಂಡು ಯೋಜನೆ ಅಳವಡಿಸಿ ಯಶಸ್ವಿಯಾಗಿ ಪೂರೈಸಿದೆ.

## ಯಾರಿಂದ ಪ್ರೇರಣೆ:

ಈ ಪುಸ್ತಕ ರೂಪುಗೊಳ್ಳುವುದಕ್ಕೆ ಮುಖ್ಯಪ್ರೇರಣೆ ಎಂದರೆ ಅದು ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಹಾಗೂ ಅಲ್ಲಿ ಬೆಳೆಯುತ್ತಿರುವ ಪುಟ್ಟ ಮಕ್ಕಳು.

ನಮ್ಮ ಯೋಜನೆಯ ಭಾಗವಾಗಿ ದಿನಾಲೂ ಬೇರೆ ಬೇರೆ ಅಂಗನವಾಡಿಗೆ ಭೇಟಿ ನೀಡುತ್ತಿದ್ದ ನಮಗೆ ಅಲ್ಲಿ ಮಕ್ಕಳಿಗೆ ಹೇಳಿಕೊಡುತ್ತಿದ್ದ ಚಿಕ್ಕ ಪದ್ಯಗಳನ್ನು ಕೇಳಿ ನಮಗೆ ಕುತುಹಲ ಉಂಟಾಯಿತು. ಯಾಕೆಂದರೆ ಪ್ರತಿ ಅಂಗನವಾಡಿಯಲ್ಲಿ ಕೆಲವು ಬೇರೆ ಬೇರೆ ಮಕ್ಕಳ ಪದ್ಯಗಳಿರುತ್ತಿತ್ತು. ಅವುಗಳನ್ನು ಕೇಳಿದ ನಮಗೆ ಥಟ್ಟನೆ ಹೊಳೆದಿದ್ದು "ಯಾಕೆ ಈ ಎಲ್ಲಾ ಪದ್ಯಗಳನ್ನು ಕೂಡಿಸಿ ಒಂದು ಪುಸ್ತಕ ಮಾಡಬಾರದು" ಎಂದು, ನಮ್ಮ ಆ ಯೋಚನೆಯ ಫಲಿತಾಂಶವೇ "ಹಾಡುತ್ತಾ ನಲಿ, ಕಲಿಯುತ್ತಾ ಬೆಳಿ" ಎಂಬ ಪದ್ಯ ಸಂಕಲನಗಳ ಪುಸ್ತಕ.

## ಯಾರಿಗೆ ಅಗತ್ಯ:

ಚಿಕ್ಕದಾಗಿ, ಸುಂದರವಾಗಿ ಇರುವ ಈ ಎಲ್ಲ ಪದ್ಯಗಳು ಅಂಗನವಾಡಿಯಲ್ಲಿ ಹಾಗೂ ಬೆಳವಣಿಗೆ ಹಂತದಲ್ಲಿರುವ ಎಲ್ಲ ಮಕ್ಕಳಿಗೂ ಉಪಯೋಗವಾಗುತ್ತವೆ. ಅಂಗನವಾಡಿ ಕಾರ್ಯಕರ್ತೆಯರು ಇವುಗಳನ್ನು ಮಕ್ಕಳಿಗೆ ಹೇಳಿಕೊಡುವುದರಿಂದ, ಮಕ್ಕಳ ಸಮಗ್ರ ಬೆಳವಣಿಗೆಗೆ ಸಹಾಯವಾಗುತ್ತದೆ.

"ಬೆಳೆಯುವ ಸಿರಿ ಮೊಳಕೆಯಲ್ಲಿ" ಎಂಬ ಗಾದೆ ಮಾತನ್ನು ಮನಗಂಡು, ನಮ್ಮ ಈ ವಿನಮ್ರ ಪ್ರಯತ್ನದೊಂದಿಗೆ ಈ ಪುಸ್ತಕವನ್ನು ಒಂದು ಸಂಕಲನವಾಗಿ ನಿಮ್ಮ ಮುಂದೆ ಸಾದರಪಡಿಸುತ್ತಿದ್ದೇವೆ.

ಪ್ರತಿಯೊಂದು ಮಗುವಿನ ಸಮಗ್ರ ಬೆಳವಣಿಗೆಯನ್ನು ನಾವು ಐದು ವಿಭಿನ್ನ ಆಯಾಮಗಳಲ್ಲಿ ಅಂದರೆ ದೈಹಿಕ ಬೆಳವಣಿಗೆ, ಬೌದ್ಧಿಕ ಬೆಳವಣಿಗೆ, ಮಾತು ಹಾಗೂ ಭಾಷೆಯ ಬೆಳವಣಿಗೆ, ಸಾಮಾಜಿಕ ಬೆಳವಣಿಗೆ ಹಾಗೂ ಭಾವನಾತ್ಮಕ ಬೆಳವಣಿಗೆಗಳೆಂದು ಅರ್ಥೈಸಿಕೊಂಡು ಅದಕ್ಕೆ ಅನುಗುಣವಾಗಿ ಚಟುವಟಿಕೆಗಳನ್ನು ರಚಿಸಿ ನಮ್ಮ ಮನೆಗಳಲ್ಲಿ ಹಾಗೂ ಅಂಗನವಾಡಿಗಳಲ್ಲಿ ಪ್ರತಿನಿತ್ಯ ಕಾರ್ಯರೂಪಕ್ಕೆ ತಂದರೇ, ಮಕ್ಕಳ ಎಲ್ಲಾ ಸರ್ವತೋಮುಖವಾದ ಬೆಳವಣಿಗೆಯನ್ನು ಕಾಣಬಹುದು ಎಂದು ಅಭಿಪ್ರಾಯ ಪಡುತ್ತೇವೆ.

ಈ ಪುಸ್ತಕದಲ್ಲಿರುವ ಕೊಡಲಾಗಿರುವ ಮಕ್ಕಳ ಪದ್ಯಗಳು ಕೇವಲ ಹೇಳಿಕೊಡಲು ಅಥವಾ ಹಾಡಿಸಲು ಅಲ್ಲಾ, ಇವುಗಳನ್ನು ಅಭ್ಯಾಸ ಮಾಡಿಸುವ ಜವಬ್ಧಾರಿ ಕೇವಲ ಅಂಗನವಾಡಿ ಶಿಕ್ಷಕರದ್ದು ಮಾತ್ರ ಅಲ್ಲ. ಬದಲಾಗಿ, ಈ ಪದ್ಯಗಳನ್ನು ಪುನರಾವರ್ತನೆ ಮಾಡಿಸುವ ಕೆಲಸ ಮನೆಯ ಸದಸ್ಯರದ್ದು ಕೂಡ ಆಗಿರುತ್ತದೆ. ಈ ಪದ್ಯಗಳನ್ನು ಅಭಿನಯ ಗೀತೆಗಳ ತರಹ ಉಪಯೋಗಿಸಿದರೆ ಹೆಚ್ಚು ಪರಿಣಾಮಕಾರಿಯಾಗುತ್ತದೆ ಹಾಗೂ ಮಕ್ಕಳ ಸಮಗ್ರ ಬೆಳವಣಿಗೆಗೆ ಸಹಾಯವಾಗುತ್ತದೆ. ಪದ್ಯ ಹೇಳಿ ಕೊಡುವುದರ ಜೊತೆಗೆ ಅದನ್ನು ಅರ್ಥಮಾಡಿಸುವುದು ತುಂಬ ಮುಖ್ಯ ಹಾಗೂ ಉಪಯುಕ್ತವಾಗುತ್ತದೆ.

ಈ ಪದ್ಯಗಳನ್ನು ಐದೂ ಬೆಳವಣಿಗೆ ಕ್ಷೇತ್ರಗಳಿಗೂ ಉಪಯೋಗಿಸಬಹುದು.

**ಉದಾಹರಣೆಗೆ**: ತರಕಾರಿ ಬಗ್ಗೆ ಪದ್ಯ ಹೇಳಿಕೊಡುವಾಗ, ಆ ತರಕಾರಿಗಳನ್ನೂ ತೋರಿಸಿದರೆ ಮಗುವಿಗೆ ತರಕಾರಿ ಬಗ್ಗೆಯೂ ಗೊತ್ತಾಗುತ್ತದೆ ಹಾಗೇ ಪದ್ಯವನ್ನು ಕಲಿಯುತ್ತದೆ.

1. **ದೈಹಿಕ ಬೆಳವಣಿಗೆ**: ಅಭಿನಯ ಮಾಡುವುದರ ಮೂಲಕ ಪದ್ಯಗಳನ್ನು ಹೇಳಿದಾಗ ಮಗು ತನ್ನ ಅಂಗಾಂಗಗಳನ್ನು ಬಳಸಿ ಅಭಿನಯ ಮಾಡುವುದರಿಂದ ದೈಹಿಕ ಬೆಳವಣಿಗೆಗೆ ಸಹಾಯವಾಗುತ್ತದೆ.
2. **ಭಾಷೆ ಬೆಳವಣಿಗೆ**: ಹಾಡುವಾಗ ಮಕ್ಕಳ ಉಚ್ಚಾರಣೆಗೆ ಹಾಗೂ ಮಕ್ಕಳ ಪದಭಂಡಾರ ಹೆಚ್ಚಿಸಿ ಮಕ್ಕಳಿಗೆ ಹಲವಾರು ಪದಗಳ ಪರಿಚಯವಾಗುವುದು.
3. **ಬೌದ್ಧಿಕ ಬೆಳವಣಿಗೆ**: ಈ ಪದ್ಯಗಳ ಸಂಕಲನದಲ್ಲಿ ಬೇರೆ ಬೇರೆ ಗುಂಪುಗಳಿರುವುದರಿಂದ ಮಕ್ಕಳಿಗೆ ಗುಂಪು, ಬಣ್ಣ, ಆಕಾರ ಎಲ್ಲವೂ ಗೊತ್ತಾಗುತ್ತದೆ.
4. **ಸಾಮಾಜಿಕ ಬೆಳವಣಿಗೆ**: ಮಕ್ಕಳು ಗುಂಪಿನಲ್ಲಿ ಈ ಪದ್ಯಗಳನ್ನು ಹಾಡುವುದರಿಂದ ಮಕ್ಕಳ ಬೇರೆಯವರೊಂದಿಗೆ ಹೇಗೆ ಹೊಂದಿಕೊಂಡು ಇರಬೇಕು/ಆಡಬೇಕು ಎಂದು ಗೊತ್ತಾಗುತ್ತದೆ. ಕೆಲವು ಪದ್ಯಗಳು ಜಾಗ, ವೃತ್ತಿ, ವ್ಯಕ್ತಿ, ಸಂಬಂಧಗಳ ಬಗ್ಗೆ ಇರುವುದರಿಂದ ಮಗುವಿಗೆ ಇದೆಲ್ಲದರ ಪರಿಚಯವಾಗುತ್ತದೆ.

5. **ಭಾವನಾತ್ಮಕ ಬೆಳವಣಿಗೆ**: ಮಕ್ಕಳು ಪದ್ಯಗಳನ್ನು ಸಂತೋಷದಿಂದ ಹಾಡುತ್ತಾರೆ. ಕೆಲವು ಪದ್ಯಗಳ ಬೇರೆ ಭಾವನೆಗಳು/ಅಭಿನಯ ಹೊಂದಿರುವುದರಿಂದ ಮಕ್ಕಳಿಗೆ ಸಂದರ್ಭಕ್ಕೆ ತಕ್ಕ ಭಾವನೆಗಳ ಪರಿಚಯವಾಗುತ್ತದೆ.

ಈ ಪುಸ್ತಕದಲ್ಲಿರುವ ಎಲ್ಲ ಪದ್ಯಗಳು ಬೇರೆ ಬೇರೆ ಮೂಲಗಳಿಂದ ಕೇಳಿದ್ದು, ಓದಿದ್ದು, ನೋಡಿದ್ದು, ಬೇರೆ ಬೇರೆ ಮೂಲಗಳಿಂದ ಸಂಗ್ರಹಿಸಿ ಒಂದೇ ಪುಸ್ತಕ ಮಾಡಿ ಅದನ್ನು ಎಲ್ಲ ಅಂಗನವಾಡಿಗಳಿಗೆ ಶಿಕ್ಷಣದ ಉದ್ದೇಶಕ್ಕಾಗಿ ಕೊಡಲಾಗುವುದೇ ಹೊರತು ಯಾವುದೇ ವ್ಯಾವಹಾರಿಕ ಉದ್ದೇಶಕ್ಕಲ್ಲ. ಒಂದು ವೇಳೆ ಹಕ್ಕು ಸ್ವಾಮ್ಯತೆ ಇರುವ ಯಾವುದಾದರೂ ಪದ್ಯ ಈ ಪುಸ್ತಕದಲ್ಲಿ ಸೇರ್ಪಡೆಗೊಂಡಿದ್ದರೆ, ಅದಕ್ಕೆ ನಾವು ಕ್ಷಮೆ ಕೋರುತ್ತೇವೆ ಹಾಗೂ ಈ ಪುಸ್ತಕವನ್ನು ಯಾವುದೇ ಕಾರಣಕ್ಕೂ ಯಾವುದೇ ರೂಪದಲ್ಲೂ ವ್ಯಾವಹಾರಿಕ ಉದ್ದೇಶಕ್ಕೆ ಉಪಯೋಗಿಸುವುದಿಲ್ಲ ಎಂದು ದೃಢಪಡಿಸುತ್ತೇವೆ.

ಕೊನೆಯದಾಗಿ ಈ ಪುಸ್ತಕ ಹೊರಬರಲು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಅಭಿನಂದಿಸುತ್ತೇವೆ.

**ಸ್ಥಳ: ಬೆಂಗಳೂರು**
**ದಿನಾಂಕ: ಜನವರಿ, 2020**

**ಯೋಜನಾ ತಂಡ**
**೦-6 ವರ್ಷದ ಮಕ್ಕಳ ಬೆಳವಣಿಗೆ,**
**ಮಾನಸಿಕ ಆರೋಗ್ಯ ಮತ್ತು ಸುರಕ್ಷತೆಯ ಸೇವಾ ಯೋಜನೆ,**
**ಮಕ್ಕಳ ಮತ್ತು ಕಿಶೋರ ಮನೋ ವೈಧ್ಯಕೀಯ ವಿಭಾಗ,**
**ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ**
**ಸಂಸ್ಥೆ(NIMHANS)**

# ಪರಿವಿಡಿ

ಪುಸ್ತಕದಲ್ಲಿ ಕವಿತೆಗಳನ್ನು ಸುಲಭವಾಗಿ ಹುಡುಕಲು ಸಹಯವಾಗಲೆಂದು ನಾವು ಕವಿತೆಗಳ ವಿಷಯಗಳನ್ನು ಈ ಕೆಳಗಿನಂತೆ ವರ್ಗೀಕರಿಸಿದ್ದೇವೆ.


| ಕ್ರ.ಸಂ | ವಿಷಯ | ಪುಟ ಸಂಖ್ಯೆ |
|---|---|---|
| 1. | ಸಾಮಾನ್ಯ ವಿಷಯಗಳು | 1 |
| 2. | ನಮ್ಮ ದೇಶ | 21 |
| 3. | ನಮ್ಮ ದೇವರು ಮತ್ತು ಹಬ್ಬಗಳು | 23 |
| 4. | ನಮ್ಮ ಅಂಗನವಾಡಿ ನಮ್ಮ ಪಾಠ | 25 |
| 5. | ನಮ್ಮ ಪರಿಸರ | 35 |
| 6. | ಪ್ರಾಣಿಗಳು | 43 |
| 7. | ಪಕ್ಷಿಗಳು | 52 |
| 8. | ತಿಂಡಿಗಳು | 60 |
| 9. | ಹಣ್ಣುಗಳು ಮತ್ತು ತರಕಾರಿಗಳು | 63 |
| 10. | ವಾಹನಗಳು | 67 |
| 11. | ಆಟಗಳು | 71 |
| 12. | ವೃತ್ತಿಗಳು | 74 |

# 1. ಸಾಮಾನ್ಯ ವಿಷಯಗಳು

## 1.1. ಉಂಡಾಡಿ ಗುಂಡ

ಉಂಡಾಡಿ ಗುಂಡ

ಮದುವೆ ಮನೆಗೆ ಹೋದ

ಹತ್ತು ಲಾಡು ತಿಂದ


ಹೊಟ್ಟೆ ನೋವು ಅಂದ

ಅಮ್ಮ ಬೆಣ್ಣೆ ತಂದ್ಲು

ಇನ್ನು ಬೇಕು ಅಂದ

ಅಪ್ಪ ದೊಣ್ಣೆ ತಂದ

ಕೈ ಕಟ್ ಬಾಯ್ ಮುಚ್ಚ್



## 1.2. ನಿನಗೊಂದು ನನಗೊಂದು

ಸಕ್ಕರೆ ಮಂಡ್ಯ ಕಬ್ಬಿನ ಜಲ್ಲೆ

ನಿಂಗೊಂದಿಷ್ಟು ನನಗೊಂದಿಷ್ಟು

ಕುಂಬಾರಣ್ಣ ಮಾಡಿದ ಕೊಡ

ನಿನಗೊಂದು ಕೊಡ ನನಗೊಂದು ಕೊಡ

ಕೋಲಾರದ ಚಿನ್ನದ ಸರ

ನಿನಗೊಂದು ಸರಾ ನನಗೊಂದು ಸರ

ಚನ್ನಪಟ್ಟಣದ ಮರದ ಗೊಮಬೆ

ನಿನಗೊಂದು ಗೊಂಬೆ ನನಗೊಂದು ಗೊಂಬೆ

ಅಕ್ಷರ ಬರೆಯುವ ಕರಿಯ ಸ್ಲೇಟು

ನಿನಗೊಂದು ಸ್ಲೇಟು ನನಗೊಂದು ಸ್ಲೇಟು

ಮಾವನ ತೋಟದ ಮಾವಿನ ಹಣ್ಣು

ನಿನಗೊಂದು ಹಣ್ಣು ನನಗೊಂದು ಹಣ್ಣು

ಕೊಡುತೀನಿರು ತಂದ ಮೇಲೆ!

## 1.3. ಊರಿನ ಜಾತ್ರೆ

ಊರಿನ ಜಾತ್ರೆಗೆ ಸೂರಿಯು ಹೊರಟನು ಅಜ್ಜನ ಹೆಗಲೇರಿ
ಬೆಟ್ಟವ ಹತ್ತಿ ದೇಗುಲ ಸುತ್ತಿ ಎಳೆದನು ತೇರನು ಸಡಗರದಿ ॥1॥
ಡೊಳ್ಳಿನ ಬಡಿತವೂ ನಂದಿಯ ಕುಣಿತವು, ದೊಂಬರ ಆಟವು
ಭರ್ಜರಿ ಊಟವು, ತಂದಿತು ಸಂತಸ, ಸೂರಿಯ ತನುಮನಕೆ ॥2॥
ಅಂಗಡಿ ಸಾಲನು ಕಾಣುತ ಸೂರಿಯು ಹಿಗ್ಗುತ ಮನದಲಿ,
ಅಜ್ಜನ ಪೀಡಿಸಿ, ಹರ್ಷದಿ ಕೊಂಡನು ನೋಡಿದ್ದೆಲ್ಲವನು ॥3॥

## 1.4. ಜಾತ್ರೆ

ಅಕ್ಕನೇ ಗಂಗೆಯು ತಂಗಿಯೇ ಗೌರಿಯು
ನಡೆದರು ಜಾತ್ರೆಗೆ ಹರುಷದಲಿ
ಬಣ್ಣದ ಗೊಂಬೆಯ, ಉದ್ದದ ಪೀಪಿಯ
ಕೊಂಡರು ತಂದೆಯ ದುಡ್ಡಿನಲಿ
ತೇರನ್ನು ನೋಡುತ ತಿಂಡಿಯ ತಿನ್ನುತ
ಸಂತಸಗೊಂಡರು ಜಾತ್ರೆಯಲಿ
ಸಂಜೆಯ ಹೊತ್ತಿಗೆ ತಂದೆಯ ಜೊತೆಗೆ
ಹೊರಟರು ನಲಿಯುತ ಮನೆ ಕಡೆಗೆ

## 1.5. ಮಹಾರಾಜ

ಹ್ಯಾಟು ಗೀಟು ಹಾಕೊಂಡು
ಸೂಟು ಬೂಟು ಹಾಕೊಂಡು
ಕೂಲಿಂಗ್ ಗ್ಲಾಸ್ ಹಾಕೊಂಡು
ಪೇಟೆ ಗೀಟೆ ಸುತ್ತಕೊಂಡು
ಜೇಬಿನ ತುಂಬ ಕಾಸಿದ್ದರೆ
ನಾನೇ ರಾಜ, ಮಹಾರಾಜ
ರಾಜಾಧಿರಾಜ ಕೊತ್ತಂಬರಿ ಬೀಜ

### 1.6. ಗೊಂಬೆ

ಪುಟ್ಟ ಪುಟ್ಟ ಗೊಂಬೆ
ಇದು ಪುಟ್ಟದಾದ ಗೊಂಬೆ
ಅಮ್ಮ ನನಗೆ ಕೊಡಿಸಿಕೊಟ್ಟಳು
ಅಂದವಾದ ಗೊಂಬೆ
ಅದು ಮೊಟವಾದ ಗೊಂಬೆ
ಕೀ ಕೊಟ್ಟರೆ ನಡೆಯುವುದು
ಸರಾ, ಸರಾ, ಸರಾ
ಜೊ, ಜೋ ಅಂದರೆ ಮಲಗುವುದು
ಲ ಲಾ ಲ ಲಾ ಲ ಲಾ



### 1.7. ಬಾಬಾ ಗೊಂಬೆ

ಬಾಬಾ ಗೊಂಬೆ ಚಂದದ ಗೊಂಬೆ
ಪೇಟೆಯಲ್ಲಾ ಸುತ್ತೋಣ
ಬೆಣ್ಣೆ ಬಿಸ್ಕಟ್ ತಿನ್ನೋಣ
ಕುದುರೇ ಗಾಡಿ ಏರೋಣ
ಅಂಗನವಾಡಿಗೆ ಹೋಗೋಣ
ಪಾಠವನ್ನು ಓದೋಣ
ಕೂಡಿ ಆಟವನ್ನು ಆಡೋಣ
ಜುಂ ಎಂದು ಮನೆಗೆ ಹೋಗೋಣ

### 1.8. ಗತಕಾಲದ ನಮ್ಮಜ್ಜಿ

ಮಡಿ ಮಡಿ ಎನ್ನುತ ಕೂಗುತ ಬರುವಳು ನಮ್ಮಜ್ಜಿ
ಹೆಜ್ಜೆ ಹೆಜ್ಜೆಗೆ ನೀರನು ಚೆಲ್ಲುತ ಬರುವಳು ನಮ್ಮಜ್ಜಿ
ನಿಂತರೆ ಕೂತರೆ ಗಾದೆಯ ಹೇಳುತ ಬರುವಳು ನಮ್ಮಜ್ಜಿ
ಮಕ್ಕಳ ಕಂಡರೆ ನಗುತಲಿ ಬರುವಳು ನಮ್ಮಜ್ಜಿ
ಕಾಯಿ–ಬೆಲ್ಲ ಕೈಯಲಿ ಹಿಡಿದು ಬರುವಳು ನಮ್ಮಜ್ಜಿ
ಹಗಲು ರಾತ್ರಿ ಚಂದದ ಕಥೆಗಳ ಹೇಳುವ ನಮ್ಮಜ್ಜಿ

1.9. **<u>ಅಜ್ಜಿ</u>**

ಕೈಯಲ್ಲಿ ಒಂದು ಕಟ್ಟಿಗೆ
ಸೊಂಟ ಇಲ್ಲ ನೆಟ್ಟಗೆ
ಅಜ್ಜಿ ಬರುವಳು ಹಟ್ಟಿಗೆ
ಅಜ್ಜಿ ಬಂದು ಕೂರಲು
ಎಲೆ ಅಡಿಕೆ ಕುಟ್ಟಲು
ತರುವಳೊಂದು ಬಟ್ಟಲು
ಅಜ್ಜಿ ಬರುವಳು ಹಟ್ಟಿಗೆ

1.10. **<u>ನಮ್ಮ ಅಜ್ಜಿ</u>**

ಅಜ್ಜಿ ಅಜ್ಜಿ ನಮ್ಮಜ್ಜಿ
ಮುಪ್ಪಿನ ಮುದುಕಿ ನಮ್ಮಜ್ಜಿ
ಬಾಗಿದ ಬೆನ್ನಿನ ನಮ್ಮಜ್ಜಿ
ಕೋಲನು ಹಿಡಿಯುವ ನಮ್ಮಜ್ಜಿ
ಕಥೆಯನು ಹೇಳುವ ನಮ್ಮಜ್ಜಿ
ಮೋಹದ ಮಾತಿನ ನಮ್ಮಜ್ಜಿ
ಮುತ್ತನು ಕೊಡುವ ನಮ್ಮಜ್ಜಿ
ಮಕ್ಕಳ ಮೆಚ್ಚಿನ ನಮ್ಮಜ್ಜಿ



### 1.11. ಯಾಕೋ ಗೊತ್ತಿಲ್ಲ

ಚನ್ನಮಲ್ಲಕ್ಕ ಚನ್ನಮಲ್ಲಕ್ಕ ಎಲ್ಲಿಗೋಗಿದ್ದೆ?
ಬಿಂದಿ ತಗೊಂಡು ಬಾವಿ ಕಡೆ ನೀರಿಗೆ ಹೋಗಿದ್ದೆ
ಹೊಡಿಬೇಡ ಹೊಡಿಬೇಡ ಬೆನ್ನು ನೋವುತ್ತೆ
12 ರೂಪಾಯಿ ಕೆನ್ನೆ ಸರ ಹರಿದು ಹೋಗುತ್ತೆ
ಅಪ್ಪನಿಗೆ ಆಫೀಸ್ ಕೆಲಸ
ಅಮ್ಮನಿಗೆ ಮನೆ ಕೆಲಸ
ನನಗೆ ಮಾತ್ರ ಓದೋ ಕೆಲಸ, ಯಾಕೋ ಗೊತ್ತಿಲ್ಲ
ಅಪ್ಪನಿಗೆ 2 ರೊಟ್ಟಿ
ಅಮ್ಮನಿಗೆ 1 ರೊಟ್ಟಿ
ನನಗೆ ಮಾತ್ರ 1/2 ರೊಟ್ಟಿ, ಯಾಕೋ ಗೊತ್ತಿಲ್ಲ

### 1.12. ಚಿನ್ನಾರಿ

ಚಿನ್ನಾರಿ ಚಿನ್ನಾರಿ ಚಿನ್ನಾರಿ
ನನ್ನ ಮುದ್ದು ಬಂಗಾರಿ
ಆಡೋಣ ಬಾರೇ ವೈಯಾರಿ
ನನ್ನ ಲಂಗ ಜರತಾರಿ
ನಿನ್ನ ಲಂಗ ಜರತಾರಿ
ಹೂವಿನ ತೋಟಕೆ ಹೋಗೋಣ
ಚಿಟ್ಟೆಯಂತೆ ಹಾರೋಣ
ಆಡೋಣ ಬಾರೇ ವೈಯಾರಿ
ಜಿಂಕೆಯ ವನಕ್ಕೆ ಹೋಗೋಣ
ಜಿಂಕೆಯಂತೆ ಜಿಗಿಯೋಣ
ಆಡೋಣ ಬಾರೆ ವೈಯಾರಿ
ನನ್ನ ಲಂಗ ಜರತಾರಿ
ನಿನ್ನ ಲಂಗ ಜರತಾರಿ ॥ ಚಿನ್ನಾರಿ ॥




### 1.13. <u>ಡಬ್ಬಿ</u>

ತಾತನಿಗೆ ಬೇಕು ನಶ್ಯದ ಡಬ್ಬಿ
ಅಜ್ಜಿಗೆ ಬೇಕು ಕುಂಕುಮದ ಡಬ್ಬಿ
ಅಪ್ಪನಿಗೆ ಬೇಕು ಶೇವಿಂಗ್ ಡಬ್ಬಿ
ಅಮ್ಮನಿಗೆ ಬೇಕು ಪೌಡರ್ ಡಬ್ಬಿ
ಪಾಪನಿಗೆ ಬೇಕು ಹಾಲಿನ ಡಬ್ಬಿ
ನನಗೆ ಬೇಕು ಚಾಕಲೇಟ್ ಡಬ್ಬಿ

### 1.14. <u>ನಮ್ಮ ಮನೆಯಲೊಂದು ಪುಟ್ಟ ಪಾಪು</u>

ನಮ್ಮ ಮನೆಯಲೊಂದು ಪುಟ್ಟ ಪಾವು
ಎತ್ತಿಕೊಳ್ಳದೆ ಹೋದೆ ಕೋಪ ಬರುವುದು
ಕೋಪ ಬರಲು ಗಟ್ಟಿಯಾಗಿ ಕಿರುಚಿಕೊಳ್ಳುವುದು
ಕಿರುಚಿಕೊಂಡು ತನ್ನ ಮೈ ಪರಚಿಕೊಳ್ಳುವುದು
ಮೈಯ ಪರಚಿಕೊಂಡು ಪಾಪ ಕರೆಯುವುದು
ಅಳಲು ಕಣ್ಣಿನಿಂದ ಸಣ್ಣ ಮುತ್ತು ಸುರಿಯುವುದು
ಪಾಪ ಅತ್ತರಮ್ಮ ತಾನು ಅಳುವಳು
ಅಯ್ಯೋ ಪಾಪ ಅಂದುಕೊಂಡು ಅಮ್ಮ ಮುತ್ತು ಕೊಡುವಳು
ಪಾಪ ಪಟ್ಟು ಹಿಡಿದ ಹಠವು ಸಾರ್ಥಕವಾಯಿತು
ಕಿರುಚಿ ಪರುಚಿ ಅತ್ತಿದೆಲ್ಲಾ ಅರ್ಥವಾಯಿತು ।



### 1.15. <u>ಅಮ್ಮನ ಮಡಿಲು</u>

ಅಮ್ಮನ ಮಡಿಲಲ್ಲಿ ಕುಳಿತಿರುವ ತಮ್ಮಗೆ
ಮೂಗಿನ ತುದಿಯಲಿ ಹೆಮ್ಮೆ
ಗುಮ್ಮ ಬಂದಳು ಎಂದರೆ ಸಾಕು
ಚೀರಿ ಬಿಡುವ ಒಮ್ಮೊಮ್ಮೆ

## 1.16. ಡೊಳ್ಳು ಹೊಟ್ಟೆ ಗುಂಡ

ಡೊಳ್ಳು ಹೊಟ್ಟೆ ಗುಂಡ ತಿನ್ನೋದ್ರಲಿ ಭಂಡ
ಕೇಳಿ ಕೇಳಿ ಹಾಕಿಸ್ಕೊಂಡು ತಿಂದ ನೂರು ಬೋಂಡಾ
ಊಟ ಅವನಿಗೆ ಇಷ್ಟ, ಪಾಠ ಅವನಿಗೆ ಕಷ್ಟ
ಕ್ಲಾಸಿನಲ್ಲಿ ಗೊರಕೆ ಹೊಡೆದು ಮೂರು ಗಾಳಿ ಬಿಟ್ಟ
ಕ್ಲಾಸಿನಲ್ಲಿ ಗೊರಕೆ ಹೊಡೆದು ಬಾರಿ ಹುಸು ಬಿಟ್ಟ

## 1.17. ತೋಟಕೆ ಹೋಗೋ ತಿಮ್ಮ


ತೋಟಕೆ ಹೋಗೋ ತಿಮ್ಮ
ತೊಳ ಬಂದೀತಮ್ಮಾ
ಹಸು ಮೇಯ್ಸೊ ತಿಮ್ಮ
ಹಸು ಹಾದೀತಮ್ಮ
ಒಲೆ ಉರಿಸೋ ತಿಮ್ಮ
ಉರಿ ಸುಟ್ಟೀತಮ್ಮ
ಪಾಠ ಬರೆಯೋ ತಿಮ್ಮ
ಬಳಪ ಇಲ್ಲ ಅಮ್ಮ
ನೀರು ಸೇದೋ ತಿಮ್ಮ
ಕೈಯ್ಯ ನೋವು ಅಮ್ಮ
ಕಾವಲಿ ತಾರೋ ತಿಮ್ಮ
ಕಾಲು ನೋವು ಅಮ್ಮ
ಹೂವು ಬಿಡಿಸೋ ತಿಮ್ಮ
ಹಾವು ಬಂದೀತಮ್ಮ
ಊಟಕೆ ಬಾರೋ ತಿಮ್ಮ
ಓಡಿ ಬಂದೆನಮ್ಮ!

## 1.18. ಅಣ್ಣ

ಮೈಸೂರಿಂದ ಅಣ್ಣ ಬಂದ
ನನಗೆ ಒಂದು ಲಂಗ ತಂದ
ಲಂಗದ ಚಿತ್ರ ಎಂತಾ ಚಂದ
ನೋಡು ಬಾರೆ ನಲಿಯ ಬಾರೆ
ಮೈಸೂರಿಂದ ಅಣ್ಣ ಬಂದ
ನನಗೆ ಒಂದು ಷರ್ಟ್ ತಂದ
ಷರ್ಟ್‌ನ ಚಿತ್ರ ಎಂತಾ ಚಂದ
ನೋಡು ಬಾರೆ ನಲಿಯ ಬಾರೆ

## 1.19. ಗೋಡೆ ಮೇಲಿನ ಗಡಿಯಾರಕ್ಕೆ

ಗೋಡೆ ಮೇಲಿನ ಗಡಿಯಾರಕ್ಕೆ
ಯಾಕೊ ತುಂಬ ನಿದ್ದೆ
ಟಿಕ್ ಟಿಕ್ ಎಂದು ಹಾಡಲು ಮರೆತು
ಗೊರಕೆ ಹೊಡಿತಿದೆ
ಗೊರಕೆ ಹೊಡಿಯೋ ಗಡಿಯಾರದಲಿ
ಹೊಕ್ಕಿತೊಂದು ಜೇಡ
ಹೊರಕೆ ಬಾರಲು ಆಗಲೆ ಇಲ್ಲಾ
ಅದರ ಪಜೀತಿ ಬೇಡಾ



## 1.20. ಗಡಿಯಾರದ ಸಮಯ

ಗಡಿಯಾರದ ಸದ್ದು ಟಿಕ್ ಟಿಕ್ ಟಿಕ್
ಏಳುವ ಸಮಯ ಟಿಕ್ ಟಿಕ್ ಟಿಕ್
ಅದು ಘಂಟೆಯ ಸಮಯ ಟಿಕ್ ಟಿಕ್ ಟಿಕ್
ಮುಖವನು ತೊಳೆದು ಸಮಯ ಟಿಕ್ ಟಿಕ್ ಟಿಕ್
ಎಂಟು ಘಂಟೆಯು ಟಿಕ್ ಟಿಕ್ ಟಿಕ್
ತಿಂಡಿಯ ಸಮಯ ಟಿಕ್ ಟಿಕ್ ಟಿಕ್
ಒಂಭತ್ತು ಘಂಟೆಯ ಸಮಯ ಟಿಕ್ ಟಿಕ್ ಟಿಕ್
ಅಂಗನವಾಡಿಗೆ ಹೋಗುವ ಟಿಕ್ ಟಿಕ್ ಟಿಕ್

### 1.21. ಚುಂ ಚುಂ ಲೇಡಿ

ನಾನೊಬ್ಬಳು ಚುಂ ಚುಂ ಲೇಡಿ
ಕುರ್ಚಿ ಮೇಲೆ ಕೂರುವೆ
ಕಾಫಿಯನ್ನು ಕುಡಿಯುವೆ
ಕುರ್ಚಿ ಮೇಲೆ ಕೂರುವೆ
ಕನ್ನಡ ಪತ್ರಿಕೆ ಓದುವೆ
ವ್ಯಾನಿಟಿ ಬ್ಯಾಗು ಹಾಕುವೆ
ಕಾಲೇಜಿಗೆ ನಾನು ಹೋಗುವೆ ॥

### 1.22. ಫ್ಯಾಷನ್ ಪಾಪ

ಪುಟ್ಟ ಪುಟ್ಟ ಪಾಪ, ಪುಟಾಣಿ ಪಾಪ
ಎಲ್ಲಿಗೆ ಹೊರಟೆ ಫ್ಯಾಷನ್ ಪಾಪ
ತಲೆಯಲ್ಲಿ ಟೋಪಿ, ಕಾಲಲ್ಲಿ ಬೂಟು ಕೈಯಲಿ ಚೀಲ
ಕಣ್ಣಿಗೆ ಕೂಲಿಂಗ್ ಗ್ಲಾಸು, ಎಲ್ಲಿಗೆ ಹೊರಟೆ
ಪುಟ್ಟ ಪುಟ್ಟ ಪಾಪ, ಪುಟಾಣಿ ಪಾಪ

### 1.23. ನೀರನ್ನು ತುಂಬಿ

ಅಮ್ಮ ಬಾರೆ ಕೊಡವನು ತಾರೆ
ಅಕ್ಕ ಬಾರೆ ಬಿಂದಿಗೆ ತಾರೆ
ತಂಗಿ ಬಾರೆ ಗಿಂಡಿ ತಾರೆ
ಅಣ್ಣ ಬಾರೊ ಬಕೆಟ್ಟು ತಾರೊ
ಎಲ್ಲರೂ ಸೇರಿ ನೀರನ್ನು ತುಂಬಿ
ಹಂಡೆಯು ತುಂಬಿತು ನಿಮಿಷದಲಿ

### 1.24. ಬೇಕು



ಅಪ್ಪನಿಗೆ ಬೇಕು ಜುಬ್ಬ ಪಂಚೆ

ಅಮ್ಮನಿಗೆ ಬೇಕು ರೇಷ್ಮೆ ಸೀರೆ


ಅಣ್ಣನಿಗೆ ಬೇಕು ಪ್ಯಾಂಟು ಶರ್ಟು

ಅಕ್ಕನಿಗೆ ಬೇಕು ಲಂಗ ಧಾವಣಿ

ತಂಗಿಗೆ/ತಮ್ಮನಿಗೆ ಬೇಕು ಲಂಗ ಬ್ಲೌಸ್/ಶರ್ಟು ನಿಕ್ಕರ್

ನನಗೇ ಬೇಕು ಲಂಗ ಬ್ಲೌಸ್/ಶರ್ಟು ನಿಕ್ಕರ್

### 1.25. ನೆಂಟ



ಮನೆಗೆ ಬಂದ ನೆಂಟ, ಅವನು ಜಗಳ ಗಂಟ

ಅವನು ಬಹಳ ತುಂಟ

ತಂಟೆಯ ಮಾಡಿ

ಮುರಿದು ಕೊಂಡ ಸೊಂಟ

### 1.26. ಜಾಲಾ

ನನ್ನ ಗೆಳತಿ ಮಾಲ

ಅವಳ ಗೆಳತಿ ಶೀಲ

ಮಾಲಾ ಶೀಲಾ ಸೇರಿಕೊಂಡು

ಮಾಡಿದರೊಂದು ಜಾಲಾ

### 1.27. ರೂಪ

ನನ್ನ ತಂಗಿ ರೂಪ

ಅವಳಿಗೆ ತುಂಬ ಕೋಪ

ಸಿಟ್ಟು ಬಂದಾಗ ಮಾಡುತ್ತಾಳೆ

ಮನೆ ತುಂಬಾ ರಂಪ

### 1.28. <u>ನಾಮ</u>

ನನ್ನ ತಮ್ಮ ರಾಮು

ಅವನ ಗೆಳೆಯ ಭೀಮು

ರಾಮು ಭೀಮು ಸೇರಿಕೊಂಡು

ಹಾಕಿದರೊಂದು ನಾಮ

### 1.29. <u>ಸಿದ್ದ</u>

ಸಿದ್ದ ಗೊದ್ದ, ಬಾವಿಗೆ ಬಿದ್ದ

ಎತ್ತಲು ಹೋದರೆ ಕಚ್ಚೊಕೆ ಬಂದ

ಬೆಲ್ಲ ಕೊಟ್ರೆ ಬೇಡ ಅಂದ

ಬೂಂದಿ ಕೊಟ್ರೆ ಗುಳುಂ ಅಂದ

### 1.30. <u>ಊರ ಸಂತೆ</u>

ಆಚೆ ಊರ ಸಂತೆ

ಬಹಳ ದೊಡ್ಡದಂತೆ

ದೊಡ್ಡ ಚೀಲ ದೌಡನೆ ಹೋಗಿ

ದುಡ್ಡು ಮರೆತು ನಿಂತೆ

### 1.31. <u>ನೆಗಡಿ</u>

ಅಕ್ಷಯ ಪುಟ್ಟಗೆ ಪಾಪ ನೆಗಡಿ

ಅಂಕ್ಷಿ ಅಂಕ್ಷೀ ಸೀನು

ರಿಕ್ಷಾ ಹತ್ತೀ ತಕ್ಷಣ ಹೋಗಿ

ಔಷಧಿ ತಂದೆ ನಾನು

1.32. **<u>ಜಾಣ-ಕೋಣ</u>**

ನಾನು ಒಬ್ಬ ಜಾಣ
ತಿನ್ನೋದಂದ್ರೆ ಪ್ರಾಣ
ಓದೋದ್ರಲ್ಲಿ ನಾನೊಬ್ಬ ಕೋಣ

1.33. **<u>ಝಣಾ ಝಣಾ ಝಣಾ</u>**

ಝಣಾ ಝಣಾ ಝಣಾ
ಜೇಬು ತುಂಬ ಹಣ
ಮೇಲಕ್ಕೆತ್ತಿ ಬಿದ್ದಾಗ ಸದ್ದು
ಟಣ್ ಟಣಾ ಟಣಾ
ಸುತ್ತು ಹಸಿರು ವನಾ
ನಡುವೆ ಮೇವು ದನ
ಗೊಲ್ಲನೊಬ್ಬ ಊದುತ್ತಿದ್ದ
ತಾನ ನಾನ ನಾನ



1.34. **<u>ಕಾಸು</u>**

ಹಾಲಿಗೊಂದು ಕಾಸು
ಮೊಸರಿಗೊಂದು ಕಾಸು
ಅಪ್ಪ ಕೊಟ್ಟ ಕಾಸು
ಆಕಾಶಕ್ಕೆ ಹೋಯಿತು
ಚಿಕ್ಕಪ್ಪ ಕೊಟ್ಟ ಕಾಸು
ಚಿಕ್ಕದಾಗಿ ಹೋಯಿತು
ಮಾಮ ಕೊಟ್ಟ ಕಾಸು
ಮಾಯವಾಗಿ ಹೋಯಿತು
ಅಮ್ಮ ಕೊಟ್ಟ ಕಾಸು
ಹಾಲು-ಮೊಸರಿಗೆ ಹೋಯಿತು

### 1.35. ಅಂಗಗಳು

ನನಗೆ ಕಣ್ಣುಗಳೆರಡು

ನನಗೆ ಕಿವಿಗಳೆರಡು




ನನಗೆ ಹುಬ್ಬುಗಳೆರಡು

ಮೂಗಿನ ಹೊಳ್ಳೆಗಳೆರಡು

ನನಗೆ ಕೈಗಳೆರಡು

ನನಗೆ ಕಾಲುಗಳೆರಡು

### 1.36. ಅಂಗಗಳ ಸಂಖ್ಯೆ



ನನಗೆ ಒಂದು ರುಂಡವು

ಬುದ್ಧಿ ಅಲ್ಲಿ ಅಡಕವು

ತಲೆಯ ಮೇಲೆ ಕೂದಲು

ಕಣ್ಣು ಮೂಗು ಕಿವಿಗಳು

ಗ್ರಹಿಸಿ ತಲೆಯಲಡುವುವು

ನನಗೆ ಒಂದು ಮುಂಡವು

ಕೊಡುವದೆನೆಗೆ ನಿಲುವು

ಉದ್ದ ಕೈಗಳೆರಡು ನನಗೆ

ಮಾಡುವುದವು ಹೇಳದಂತೆ



ಉದ್ದ ಎರಡು ಕಾಲ್ಗಳೆನಗೆ

ನಡೆಯುವವು ಬಯಸಿದೆಡೆಗೆ

### 1.37. ನನ್ನ ತಲೆಯು ಒಂದು

ನನ್ನ ತಲೆಯು ಒಂದು

ನನ್ನ ಹಣೆಯು ಒಂದು

ನನ್ನ ಮೂಗು ಒಂದು

ನನ್ನ ಬಾಯಿಯು ಒಂದು

ನನ್ನ ನಾಲಗೆ ಒಂದು

ನನ್ನ ಹೊಟ್ಟೆಯು ಒಂದು

ನನ್ನ ಬೆನ್ನು ಒಂದು

1.38. **<u>ದೇಹ</u>**

ಎರಡು ಪುಟ್ಟ ಕಣ್ಣುಗಳು ದೇವರನ್ನು ನೋಡಲು

ಎರಡು ಪುಟ್ಟ ಕಿವಿಗಳು ದಿವ್ಯವಾಣಿ ಕೇಳಲು

ಎರಡು ಪುಟ್ಟ ಕೈಗಳು ಒಳ್ಳೆ ಕೆಲಸ ಮಾಡಲು

ಎರಡು ಚಿಕ್ಕ ಕಾಲುಗಳು ಕುಣಿದು ಆಟ ಆಡಲು

ಒಂದು ಚಿಕ್ಕ ಹೃದಯ ಎಲ್ಲರನ್ನು ಪ್ರೀತಿಸಲು

1.39. **<u>ತಾಳಕೊಡು ತಾಳಕೊಡು</u>**

ತಾಳಕೊಡು ತಾಳಕೊಡು

ಕೈಯ ಮುಟ್ಟಿ ತಾಳಕೊಡು

ತಾಳಕೊಡು ತಾಳಕೊಡು

ತಲೆಯ ಮುಟ್ಟಿ ತಾಳಕೊಡು

ಹಣೆಯ ಮುಟ್ಟಿ ತಾಳಕೊಡು

ತಾಳಕೊಡು ತಾಳಕೊಡು

ಕಣ್ಣ ಮುಟ್ಟಿ ತಾಳಕೊಡು

ತಾಳಕೊಡು ತಾಳಕೊಡು

ಬಾಯ ಮುಟ್ಟಿ ತಾಳಕೊಡು


ತೊಡೆಯ ಮುಟ್ಟಿ ತಾಳಕೊಡು

ತಾಳಕೊಡು ತಾಳಕೊಡು

ಕೆನ್ನೆ ಮುಟ್ಟಿ ತಾಳಕೊಡು

ತಾಳಕೊಡು ತಾಳಕೊಡು

ಹೊಟ್ಟೆ ಮುಟ್ಟಿ ತಾಳಕೊಡು




### 1.40. <u>ಆಚೆ ಮನೆಯ ಸುಬ್ಬಮ್ಮ</u>

ಆಚೆ ಮನೆಯ ಸುಬ್ಬಮ್ಮನಿಗೆ
ಏಕಾದಶಿ ಉಪವಾಸ ।
ಎಲ್ಲೊ ಸ್ವಲ್ಪ ತಿಂತಾರಷ್ಟೇ
ಉಪ್ಪಿಟ್ಟು ಅವಲಕ್ಕಿ ಪಾಯಸ ॥
ಮೂರೋ ನಾಲ್ಕೋ ಬಾಳೆಹಣ್ಣು
ಸ್ವಲ್ಪ ಚಕ್ಕುಲಿ ಕೋಡಬಳೆ ।
ಘಂಟೆಗೆ ಎರಡು ಸೀಬೇಹಣ್ಣು
ಆಗಾಗ ಒಂದು ಕಿತ್ತಳೆ ॥
ಮಧ್ಯಾಹ್ನಕ್ಕೆಲ್ಲ ರವೆ ಉಂಡೆ
ಹುರುಳಿ ಕಾಳಿನ ಉಸಲಿ ।
ಎಲ್ಲೋ ಸ್ವಲ್ಪ ಬಿಸಿ ಸಂಡಿಗೆ
ಐದೋ ಆರೋ ಇಡ್ಲಿ ॥
ರಾತ್ರಿಗೆ ಪಾಪ ಉಪ್ಪಿಟ್ಟೇ ಗತಿ
ಒಂದು ಲೋಟದ ತುಂಬಾ ಹಾಲು ।
ಪಕ್ಕದ ಮನೆಯ ರಾಮೇಗೌಡರ
ಸೀಮೆ ಹಸುವಿನ ಹಾಲು ॥

### 1.41. <u>ಟೋಪಿ</u>

ಟೋಪಿ ಬೇಕಾ ಟೋಪಿ
ಎಂತಹ ಟೋಪಿ
ಚಿನ್ನದ ಟೋಪಿ ಎಷ್ಟು ರೂಪಾಯಿ
ಸಾವಿರ ರೂಪಾಯಿ ಬೇಡ ಬೇಡ
ಒಂದು ರೂಪಾಯಿ ಬೇಕು ಬೇಕು
ನನಗೆ ಬೇಕು



**1.42. ಐದು**

ಐದು ಬೆರಳಿವೆ ಕೈಯೊಳಗೆ

ಐವರು ಇರುವರು ಮನೆಯೊಳಗೆ

ಐರಾವತಕೆ ಬಿಳಿ ಬಣ್ಣ

ಐಕ್ಯತೆ ನಮ್ಮ ಬದುಕಣ್ಣ

**1.43. ಮಾವ**

ಮಾವ ಮಾವ ಮಾತಾಡು

ಮಾವಿನ ಮರಕ್ಕೆ ಜೋತಾಡು

ಮಾವಿನ ಕೊಂಬೆ ಮುರಿದೊಯ್ತು

ಮಾವನ ಪ್ಯಾಂಟ್ ಹರಿದೋಯ್ತು

**1.44. ಶಬ್ಧ**

ಬಳೆಗಳ ಶಬ್ಧ ಘಲ್ ಘಲ್

ಗೆಜ್ಜೆಯ ಶಬ್ಧ ಝಲ್ ಝಲ್

ನಾಣ್ಯದ ಶಬ್ಧ ಝಣ್ ಝಣ್

ಗಂಟೆಯ ಶಬ್ಧ ಢಣ್ ಢಣ್


ಗಡಿಯಾರದ ಶಬ್ಧ ಟಿಕ್ ಟಿಕ್

ಸೈಕಲ್ ಶಬ್ಧ ಟ್ರಿಣ್ ಟ್ರಿಣ್


ಗಾಡಿಯ ಶಬ್ಧ ಗಡ್ ಗಡ್

ಹೃದಯದ ಶಬ್ಧ ಲಬ್ ಡಬ್ ಲಬ್ ಡಬ್





### 1.45. ಟಿ.ವಿ. ಹಾಡು



ಟಿವಿ, ಟಿವಿ, ಟಿವಿ

ಚೆಂದದ ಬಣ್ಣದ ಟಿವಿ

ಕಣ್ಣಿಗೆ ಸಂಪು ಕಿವಿಗೆ ಇಂಪು

ಸುದ್ದಿ ಬೀರುವ ಬಣ್ಣದ ಟಿವಿ

ಹಾಡನು ಹೇಳುವ

ಆಟವ ತೋರುವ

ನಕ್ಕು ನಲಿಸುವ ಎಲ್ಲರ ಟಿವಿ

### 1.46. ದೂರವಾಣಿ

ದೂರವಾಣಿ ದೂರವಾಣಿ ಚೆಂದ ಬಣ್ಣದ ದೂರವಾಣಿ

ಸುದ್ಧಿಯ ತಿಳಿಸುವ ದೂರವಾಣಿ



ಸಂತೋಷ ತರುವ ದೂರವಾಣಿ

ಕಷ್ಟವ ತಿಳಿಸುವ ದೂರವಾಣಿ

ಎಲ್ಲರ ಹತ್ತಿರ ಮಾತನಾಡುವ ದೂರವಾಣಿ

### 1.47. ಮೊಬೈಲ್ ಹಾಡು

ಬಂತು ಬಂತು ಮೊಬೈಲ್ ಬಂತು

ರಿಂಗ್ ಮಾಡುವೆ ವಿಷಯ ತಿಳಿಸುವೆ

ಮೊಬೈಲ್ ಹಾಕುವೆ ಹಾಡನ್ನು ಕೇಳುವೆ

ಹಾಡನ್ನು ಕೇಲಿ ಸಂತೋಷಪಡುವೆ



ಎಲ್ಲಿಂದೆಲ್ಲಿಗೂ ಮಾತನಾಡಲು ಒಯ್ಯಲುಬಹುದು

ಬೇರೆ ಕೆಲಸ ಮಾಡುತ ಕೂಡ ಕೇಳಬಹುದು

ಮೊಬೈಲ್ ಮೂವೆಬಲ್ ವಾಣಿ

1.48. <u>ಢುಂ ಢುಂ ಢುಂ</u>

ದೊಡ್ಡಮ್ಮ ದೊಡ್ಡಮ್ಮ ದೊನ್ನೆ ಕೊಡು

ಚಿಕ್ಕಮ್ಮ ಚಿಕ್ಕಮ್ಮ ಚಟ್ನಿ ಕೊಡು

ಪಾಪುವಿನ ಕೈಯಲ್ಲಿ ಪೀ ಪೀ ಕೊಡು

ಡುಮ್ಮನ ಕೈಯಲ್ಲಿ ಡೋಲು ಕೊಡು

ತಮ್ಮನ ಕೈಯಲ್ಲಿ ತಮಟೆ ಕೊಡು

ಢುಂ ಢುಂ ಢುಂ

ಪೀ ಪೀ ಪೀ

1.49. <u>ವಾದ್ಯಗಳು</u>

ಶ್ಯಾಮನು ಬಂದನು ಓಲಗ ಊದುತ

ಪೀ ಪೀ ಪೀ ಪೀ

ರಾಮನು ಬಂದನು ಡೋಲನು ಬಡಿಯುತ

ಢುಂ ಢುಂ ಢುಂ

ಸಿದ್ಧನು ಬಂದನು ತಾಳವ ಹಾಕುತ


ಚಣ್ ಚಣ್ ಚಣ್

ರಾಧೆಯು ಬಂದಳು ಗೆಜ್ಜೆಯ ಕುಣಿಯುತ

ಘಲ್ ಘಲ್ ಘಲ್

ಇವರ ಜೊತೆಗೆ ಮಕ್ಕಳು ಕುಣಿದರು

ತಕಿತ ತಕ ತಕಿತ ತಕ ತಕಿತ ತಕ



**1.50. ಶುಚಿ ಇಲ್ಲದಿದ್ದರೆ ಆಗುವುದು ಕಜ್ಜಿ**

ಶುಚಿ ಇಲ್ಲದಿದ್ದರೆ ಆಗುವುದು ಕಜ್ಜಿ
ಕಜ್ಜಿಯಾದರೆ ಚುಚ್ಚುವುದು ಸೂಜಿ
ಜೊತೆಯಲಿ ಕೊಡುವರು ಕೆಂಪು ಔಷಧ
ಹಚ್ಚಲು ಕೊಡುವರು ಬಿಳೀ ಔಷಧಿ
ಬೇಡ ಬೇಡ ಸೂಜಿ ಔಷಧಿ
ಶುಚಿಯಾಗಿ ಇರಲು ಕಲಿಯೋಣ
ಪ್ರತಿದಿನ ಅಂಗನವಾಡಿಗೆ ಹೋಗೋಣ


**1.51. ಅಣ್ಣಾ ಅಣ್ಣಾ ಬಾರಣ್ಣಾ**

ಅಣ್ಣಾ ಅಣ್ಣಾ ಬಾರಣ್ಣಾ
ದಿನಾಲೂ ಸ್ನಾನವ ಮಾಡಣ್ಣಾ
ಅಣ್ಣಾ ಅಣ್ಣಾ ಮಾಡಣ್ಣಾ
ಮನೆಯನು ಸ್ವಚ್ಛವ ಮಾಡಣ್ಣಾ
ಅಣ್ಣಾ ಅಣ್ಣಾ ಬೇಡಣ್ಣಾ
ಎಂಜಲು ನೀರು ಕುಡಿಯದಿರಣ್ಣಾ
ಅಣ್ಣಾ ಅಣ್ಣಾ ಹೋಗಣ್ಣಾ
ದಿನಾಲು ದೂರದಿ ಕಾಡಿಗೆ ಹೋಗಣ್ಣಾ
ಅಣ್ಣಾ ಅಣ್ಣಾ ಬೇಡಣ್ಣಾ
ಕಸವನು ಬೀದೀಲಿ ಎಸೆಯದಿರಣ್ಣಾ
ಅಣ್ಣಾ ಅಣ್ಣಾ ಹಾಕಣ್ಣ
ಕಸವನು ಗುಂಡಿಯಲ್ಲಿ ಹಾಕಣ್ಣಾ !

### 1.52. <u>ಮನೆ</u>

ಮನೆ ಮನೆ ನನ್ನ ಮನೆ
ಅಜ್ಜ ಅಜ್ಜಿ ಇದ್ದ ಮನೆ
ನನ್ನ ತಂದೆ ಬೆಳೆದ ಮನೆ
ನನ್ನ ಅಮ್ಮ ಒಲಿದ ಮನೆ
ತಂಗಿ ತಮ್ಮ ನಲಿದ ಮನೆ
ನಾನು ಬಿದ್ದು ಎದ್ದ ಮನೆ
ತಾಯಿ ಪ್ರೀತಿಯುಂಡ ಮನೆ





## 2. ನಮ್ಮ ದೇಶ

### 2.1. ಭಾರತ

ನಮ್ಮ ದೇಶ ಭಾರತ, ಹೇಳರೆಲ್ಲ ಹಿಗ್ಗುತ
ಜೇನು ಸುರಿವ ದೇಶವು, ಹಾಲು ಹರಿವ ದೇಶವು
ಬೆಟ್ಟ ಸಾಲು ಮೆರದಿದೆ, ನದಿಯ ನೀರು ಹರಿದಿದೆ
ಎಂತಾ ನಾಡು ನಮ್ಮದು, ನಮ್ಮ ತಾಯಿ ನಾಡಿದು
ನಮ್ಮ ದೇಶ ಭಾರತ ॥

### 2.2. ಗಾಂಧಿ ತಾತ

ಗಾಂಧಿ ತಾತ ಬಂದಿದ್ರು
ಹತ್ತಿ ಬಟ್ಟೆ ಧರಿಸಿದ್ರು

ಕೈಯಲ್ಲಿ ಕೋಲು ಹಿಡಿದಿದ್ರು
ಬ್ರಿಟಿಷರನ್ನು ಓಡಿಸಿದ್ರು
ಗುಂಡಿನ ಏಟಿಗೆ ಬಲಿಯಾದ್ರು
ರಾಮ ರಾಮ ಎಂದು ಉಸಿರೆಳೆದ್ರು



### 2.3. ನೆಹರು

ಅದೋ ನೋಡು ಕಾರು
ಕಾರು ಒಳಗೆ ಯಾರು
ನಮ್ಮ ಮಾಮ ನೆಹರು
ನೆಹರು ಏನು ಎಂದರು
ಚೆನ್ನಾಗಿ ಓದಿ ಎಂದರು


2.4. **<u>ನಮ್ಮ ಬಾವುಟ</u>**

ಏರುತಿದೆ ಹಾರುತಿದೆ ನೋಡು ನಮ್ಮ ಬಾವುಟ

ಹಾರುತಿದೆ ಹೊಡೆದು ಹೊಡೆದು, ಬಾನಿನಗಲ ಪಟ ಪಟ

ಕೇಸರಿ ಬಿಳಿ ಹಸಿರು ಮೂರು ಬಣ್ಣ ನಡುವೆ ಚಕ್ರವು

ಸತ್ಯ ಶಾಂತಿ ತ್ಯಾಗಮೂರ್ತಿ ಗಾಂಧಿ ಹಿಡಿದ ಬಾವುಟ



2.5. **<u>ಧ್ವಜ ವಂದನೆ</u>**

ಹಾರುತಿದೆ ನೋಡಿರಲ್ಲ ನಮ್ಮ ಬಾವುಟ

ಮೂರು ಬಣ್ಣದಿಂದ ನಲಿವ ದಿವ್ಯ ಬಾವುಟ

ಗಗನವೇರಿ ಭರದಿ ಕುಣಿವ ಗಣಕ ಬಾವುಟ

ಗಾಂಧಿ ತಾತ ತಂದು ಕೊಟ್ಟ ಸ್ವತಂತ್ರ ಬಾವುಟ ॥

ಭಾರತ ದೇಶ ನಮ್ಮದೆಂದು ಮೆರೆವ ಬಾವುಟ

ಸತ್ಯ ಧರ್ಮ ನಿತ್ಯಕಾಮ ಅಮರ ಬಾವುಟ

ಭಾರತೀಯರೆಲ್ಲ ನಮಿಪ ಮಧುರ ಬಾವುಟ

ನಮ್ಮ ಬಾವುಟ ನಮ್ಮ ಬಾವುಟ ನಮ್ಮ ಬಾವುಟ

2.6. **<u>ನಮ್ಮ ರಾಷ್ಟ್ರ</u>**

ರಾಷ್ಟ್ರೀಯ ಪ್ರಾಣಿ ಹುಲಿ

ಅದರ ಪಕ್ಕ ಇಲಿ

ರಾಷ್ಟ್ರೀಯ ಪಕ್ಷಿ ನವಿಲು

ಮೇಲೆ ನೋಡು ಮುಗಿಲು

ರಾಷ್ಟ್ರೀಯ ಹೂವು ಕಮಲ

ನನ್ನ ಗೆಳತಿ ವಿಮಲ

ರಾಷ್ಟ್ರೀಯ ಹಣ್ಣು ಮಾವು

ತುಂಬಾ ಕಹಿ ಬೇವು

# ೩. <u>ನಮ್ಮ ದೇವರು ಮತ್ತು ಹಬ್ಬಗಳು</u>

### ೩.೧. **ಗಣಪತಿ ಹಾಡು**

ಬಾರೋ ಬಾರೋ ಗಣಪ, ಡೊಳ್ಳು ಹೊಟ್ಟೆ ಏಕಪ್ಪಾ
ಸಣ್ಣ ಕಣ್ಣು ಏಕಪ್ಪಾ, ಇಲಿಯ ವಾಹನ ನೀನಪ್ಪಾ
ಅದೋ ಬಂದ ಹಾವಪ್ಪ, ಎಗರಿ ಹೋದ ಇಲಿಯಪ್ಪ
ಜಾರಿಬಿದ್ದ ಗಣಪ, ನೋಡಿ ನಕ್ಕ ಚಂದ್ರಪ್ಪ
ಶಾಪ ಕೊಟ್ಟ ಗಣಪ, ಬುದ್ಧಿ ಕೊಡೋ ನಮ್ಮಪ್ಪ ॥ಬಾರೋ॥




### ೩.೨. **ದೇವರ ಪೂಜೆ**

1–2 ಗುಡಿಗೆ ಹೊರಡು
3–4 ಪ್ರದಕ್ಷಣೆ ಹಾಕು
5–6 ವರವನು ಕೋರು
7–8 ಪ್ರಸಾದ ಉಂಟು
9–10 ದೇವರ ಪೂಜೆ ಮುಗಿದಿತ್ತು!

### ೩.೩. **ಯಾರು ನಮ್ಮ ದೇವರು?**

ದೇವರಂತೆ ದೇವರು ಯಾರು ನಮ್ಮ ದೇವರು
ಹೆತ್ತ ತಾಯಿ ದೇವರು
ಇತ್ತ ತಂದೆ ದೇವರು
ನಮ್ಮ ಗುರುವು ದೇವರು
ಮುದ್ದು ಕಂದ ದೇವರು


### ೩.೪. ಹಬ್ಬ



ಅಂಗಿ ಬಂತು ಲಂಗ ಬಂತು ಹಬ್ಬಕ್ಕೆ
ತಿಂಡಿ ಬಂತು ಉಂಡೆ ಬಂತು ತಿನ್ನೋಕೆ
ಹಾಲು ಬಂತು ಪಾಯಸ ಬಂತು ಕುಡಿಯೋಕೆ
ಚೆಂಡು ಬಂತು ಧಾಂಡು ಬಂತು ಆಡೊಕೆ
ಪುಸ್ತಕ ಬಂತು ಪೆನ್ನು ಬಂತು ಬರೆಯೋಕೆ

### ೩.೫. ಹಬ್ಬದ ಗಮ್ಮತ್ತು

ಹಬ್ಬ ಬಂದಾಗ ಕಡಬನ್ನು ತಿನ್ನುವ ಗಮ್ಮತ್ತು
ಯುಗಾದಿ ಬಂದಾಗ ಹೋಳಿಗೆ ತಿನ್ನುವ ಗಮ್ಮತ್ತು
ದೀಪಾವಳಿ ಬಂದಾಗ ಪಟಾಕಿ ಹಾರಿಸುವ ಗಮ್ಮತ್ತು
ಕ್ರಿಸ್‌ಮಸ್ ಬಂದಾಗ ಮನೆ ಅಲಂಕರಿಸುವ ಗಮ್ಮತ್ತು
ರಂಜಾನ್ ಬಂದಾಗ ಹೊಸ ಬಟ್ಟೆ ಹಾಕುವ ಗಮ್ಮತ್ತು



### ೩.೬. ಹಬ್ಬಗಳು

ಹೆಜ್ಜೆಯ ಹಾಕುತ ಬನ್ನಿರಿ ಮುಂದೆ
ನೋಡಲು ದಸರೆಯ ಹಬ್ಬವನು
ಗೆಜ್ಜೆಯ ಕಟ್ಟಿ ಕುಣಿಯುತ ಬನ್ನಿ
ನಾಡಿನ ಹಾಡನು ಹಾಡುತ ಬನ್ನಿ
ಕನ್ನಡ ಕವಿಗಳ ನೋಡುವ ಬನ್ನಿ
ದೇವಿಯ ದರ್ಶನ ಮಾಡುವ ಬನ್ನಿ
ನಗು ಮುಖ ಹೊತ್ತು ಬನ್ನಿ
ಮುಂದೆ ನೋಡಲು ದಸರೆಯ ಹಬ್ಬವನು



# 4. ನಮ್ಮ ಅಂಗನವಾಡಿ ನಮ್ಮ ಪಾಠ

## 4.1. ಪುಟ್ಟ ಮಕ್ಕಳು

ಒಂದು ಪುಟ್ಟ ಮಗು, ಎರಡು ಪುಟ್ಟ ಮಕ್ಕಳು
ಮೂರು ಪುಟ್ಟ ಮಕ್ಕಳು, ನಾಲ್ಕು ಪುಟ್ಟ ಮಕ್ಕಳು
ಐದು ಪುಟ್ಟ ಮಕ್ಕಳು, ಆರು ಪುಟ್ಟ ಮಕ್ಕಳು
ಏಳು ಪುಟ್ಟ ಮಕ್ಕಳು, ಎಂಟು ಪುಟ್ಟ ಮಕ್ಕಳು
ಒಂಬತ್ತು ಪುಟ್ಟ ಮಕ್ಕಳು, ಸಾಲು ಎಣಿಸಿದಾಗ
ಹತ್ತು ಪುಟ್ಟ ಪುಟ್ಟ ಮಕ್ಕಳು!

## 4.2. ಗೆಳೆಯರು

ಗೆಳೆಯ ಗೆಳತಿಯರು ಕೂಡೋಣ
ಹೂವಿನ ತೋಟಕ್ಕೆ ಹೋಗೋಣ
ಬೇಗ ಬೇಗ ಹೂಗಳ ಕೀಳೋಣ
ಚಂದದ ಮಾಲೆಯ ಮಾಡೋಣ
ದೇವರ ಕೊರಳಿಗೆ ಹಾಕೋಣ
ಸುತ್ತ ಮುತ್ತಾ ತಿರುಗೋಣ
ವಿದ್ಯೆ ಬುದ್ಧಿ ಬೇಡೋಣ

## 4.3. ಪುಟ್ಟಿದೊಂದು ಸ್ಲೇಟು

ಪುಟ್ಟಿದೊಂದು ಸ್ಲೇಟು,
ಬಳ್ಪದೊಂದು ಗೀಟು
ಬರೆಯಲು ಬಾರದ ಹೋದರೆ,
ಕೈ ಮೇಲೆ ಏಟು
ಅಪ್ಪಕೊಟ್ಟ ಕಾಸು,
ಅಮ್ಮ ಕೊಟ್ಟ ತಿಂಡಿ
ಸ್ಕೂಲ್ ಮುಂದೆ ಗೇಟು,
ಅಲ್ಲಿ ಬಿದ್ದರೆ ಏಟು

## 4.4. ನನ್ನ ಸ್ಲೇಟು

ನನ್ನ ಸ್ಲೇಟು ಕರಿಯದು,

ಅದರ ಕಟ್ಟು ಬಿಳಿಯದು

ಬರೆಯಲಿಕ್ಕೆ ಬರುವುದು,

ಬಹಳ ಚಂದವಿರುವುದು

ಅಪ್ಪ ದುಡ್ಡು ಕೊಟ್ಟರು,

ಬಳಪವನ್ನು ತಂದೆನು

ಅ ಆ ಇ ಈ ಬರೆದೆನು


ಅಮ್ಮನ ಮುಂದೆ ಹಿಡಿದೆನು

ಅಮ್ಮ ಹಿಗ್ಗಿ ಹೋದಳು

ತಿನ್ನಲು ಉಂಡೆ ಕೊಟ್ಟಳು

ಮೆಲ್ಲ ಮೆಲ್ಲನೆ ತಿಂದೆನು

ತಕ ತಕ ಕುಣಿದೆನು




## 4.5. ವಿದ್ಯೆ

ಕಲಿಯಬೇಕು ವಿದ್ಯೆ

ಇರಿಸಬೇಕು ಶ್ರದ್ಧೆ

ಆಮೇಲೆ ಸಿಗುವುದು ಕಲೆ

ವಿದ್ಯೆ ಒಂದು ಕಲೆ

ಅದನು ಕಲಿತರೆ ಬೆಲೆ

ಆಮೇಲೆ ಸಿಗುವುದು ನೆಲೆ

ವಿದ್ಯೆ ಒಂದು ತಪಸ್ಸು

ಅದನು ಕಲಿತರೆ ಯಶಸ್ಸು

ಆಮೇಲೆ ಸಿಗುವುದು ಶ್ರೇಯಸ್ಸು

ವಿದ್ಯೆ ಒಂದು ಧನ


ಅದನು ಕಲಿತರೆ ಆಮೇಲೆ ಸಿಗುವುದು ಧನ

**4.6. <u>ಒಂದರಿಂದ ಹತ್ತು</u>**

ಒಂದು ಎರಡು ಬಾಳೆಲೆ ಹರಡು
ಮೂರು ನಾಲ್ಕು ಅನ್ನಾ ಹಾಕು
ಐದು ಆರು ಬೇಳೆ ಸಾರು
ಏಳು ಎಂಟು ಪಲ್ಯಕ್ಕೆ ದಂಟು
ಒಂಬತ್ತು ಹತ್ತು ಎಲೆ ಮುದಿರೆತ್ತು
ಒಂದರಿಂದ ಹತ್ತು ಹೀಗಿತ್ತು
ಊಟದ ಆಟವು ಮುಗಿದಿತ್ತು

4.7. <u>1 ರಿಂದ 10</u>

1–2 ಬೇಗನೆ ಏಳು
3–4 ಹಲ್ಲನು ಉಜ್ಜು
5–6 ಸ್ನಾನವ ಮಾಡು
7–8 ತಿಂಡಿಯ ತಿನ್ನು
9–10 ಅಂಗನವಾಡಿಗೆ ಹೊರಡು




4.8. <u>1 ರಿಂದ 10</u>

1–2 ಬೇಸನ್ ಲಾಡು
3–4 ಮೈಸೂರ್ ಪಾಕು
5–6 ಬಾದಾಮಿ ಕೀರು
7–8 ಪೆಪ್ಪರ್ ಮೆಂಟು
9–10 ಗರಂ ಗರಂ ಬಿಸ್ಕತ್

## 4.9. ಹತ್ತು ಹತ್ತು ಇಪ್ಪತ್ತು

ಹತ್ತು ಹತ್ತು ಇಪ್ಪತ್ತು
ತೋಟಕೆ ಹೋದನು ಸಂಪತ್ತು
ಇಪ್ಪತ್ತು ಹತ್ತು ಮೂವತ್ತು
ಕೈಯಲ್ಲಿ ಒಂದು ಕಲ್ಲಿತ್ತು
ಮೂವತ್ತು ಹತ್ತು ನಲವತ್ತು
ಎದುರಿಗೆ ಮಾವಿನ ಮರವಿತ್ತು
ನಲವತ್ತು ಹತ್ತು ಐವತ್ತು
ಮಾವಿನ ಮರದಲಿ ಕಾಯಿತ್ತು
ಐವತ್ತು ಹತ್ತು ಅರವತ್ತು
ಕಲ್ಲನು ಬೀಸಿದ ಸಂಪತ್ತು
ಅರವತ್ತು ಹತ್ತು ಎಪ್ಪತ್ತು
ಕಾಯಿಯು ತಪ ತಪ ಉದುರಿತ್ತು
ಎಪ್ಪತ್ತು ಹತ್ತು ಎಂಬತ್ತು
ಮಾಲಿಯ ಕಂಡನು ಸಂಪತ್ತು
ಎಂಬತ್ತು ಹತ್ತು ತೊಂಬತ್ತು
ಕಾಲುಗಳೆರಡು ನಡುಗಿತ್ತು
ತೊಂಭತ್ತು ಹತ್ತು ನೂರು
ಮನೆಯನು ಸೇರಿದ ಸಂಪತ್ತು


## 4.10. ಶಾಲೆಗೆ ಹೊರಟೆನವ್ವ

ಶಾಲೆಗೆ ಹೊರಟೆನವ್ವ ನಾನು ಶಾಲೆಗೆ ಹೊರಟೆನವ್ವ
ಸೂಟು ಬೂಟು ಹಾಕಿಕೊಂಡು ಶಾಲೆಗೆ ಹೊರಟೆನವ್ವ
ಅಪ್ಪ ಕೊಡಿಸಿದ ಪಾಠಿ ಚೀಲ ಹೆಗಲಿಗೆ ಹಾಕೆನು
ಅಮ್ಮಕೊಟ್ಟ ಬುತ್ತಿಯ ಗಂಟು ಕೈಯಲಿ ಹಿಡಿದೆನು
ಶಾಲೆಗೆ ಹೋಗಿ ಪಾಠ ಕಲಿತು ಜಾಣನಾದೆನು
ಮನೆಗೆ ಬಂದು ಹಾಲು ಕುಡಿದು ಗಟ್ಟಿಯಾದೆನು

4.11. **ಶಾಲೆಗೆ ನಾನು ಹೋಗುವೆ**

ದೇಗುಲಕ್ಕೆ ನಾ ಹೋಗುವೆ
ದೇವರಿಗೆ ನಾ ನಮಿಸುವೆ

ವಿದ್ಯೆ ಬುದ್ಧಿ ಕೇಳುವೆ
ಆಯುಸ್ಸು ಆರೋಗ್ಯ ಕೋರುವೆ
ಮನೆಗೆ ಬಂದು ಓದುವೆ
ಶಾಲೆಗೆ ನಾನು ಹೋಗುವೆ
ಪಾಠವನ್ನು ಕಲಿಯುವೆ
ಗುರುಗಳ ಮಾತು ಕೇಳುವೆ
ಓದು ಬರಹ ಕಲಿಯುವೆ
ಪ್ರಶ್ನೆಗೆ ಉತ್ತರ ತಿಳಿಯುವೆ
ಒಳ್ಳೆಯ ನಡತೆ ಕಲಿಯುವೆ
ಆಡಿ ಹಾಡಿ ನಲಿಯುವೆ
ಪರೀಕ್ಷೆಯಲ್ಲಿ ಪಾಸು ಆಗುವೆ




4.12. **ಶಾಲೆಗೆ ಹೊರಟೆನವ್ವ**

ಶಾಲೆಗೆ ಹೊರಟೇನವ್ವ ನಾನು ಶಾಲೆಗೆ ಹೊರಟೇನ
ಶೂಟು ಬೂಟು ಹಾಕಿಕೊಂಡು ಶಾಲೆಗೆ ಹೊರಟೇನ
ಅಪ್ಪಾ ಕೊಡಿಸಿದ ಪಾಟಿ ಚೀಲ ಹೆಗಲಿಗೆ ಹಾಕೇನ
ಅವ್ವ ಕೊಟ್ಟ ಬುತ್ತಿ ಗಂಟು ಕೈಯಲಿ ಹಿಡಿದೇನ
ಶಾಲೆಗೆ ಹೋಗಿ ಪಾಠ ಕಲಿತು ಜಾಣನಾದೇನ
ಮನೆಗೆ ಬಂದು ಹಾಲು ಕುಡಿದು ಗಟ್ಟಿಯಾದೇನ

4.13. **ರಜಾ–ಮಜಾ**

ನನಗೆ ಈಗ ರಜಾ
ಅದೆ ಬಹಳ ಮಜಾ
ಕೆಲಸವಿಲ್ಲಾ ಮಜಾ

4.14. <u>ಅಂಗನವಾಡಿಗೆ ನಾನು ಹೋಗುವೆನು</u>

ಜಾಣನು ನಾನು ಆಗುವೆನು
ಗೆಳೆಯರ ಕೂಡಿ ಆಡುವೆನು
ಆರೋಗ್ಯವ ಪಡೆಯುವೆನು
ಗುರುಗಳ ಸೇವೆ ಮಾಡುವೆನು
ವಿದ್ಯೆಯ ನಾನು ಗಳಿಸುವೆನು
ತಪ್ಪದೆ ದಿನವು ಒದುವೆನು
ದಿನದಿ ಹರುಷದಿ ಬರೆಯುವೆನು
ಅಂಗನವಾಡಿಗೆ ನಾನು ಹೋಗುವೆನು

4.15. <u>ನೆರೆಹೊರೆ</u>

ಸುತ್ತ-ಮುತ್ತಾ ಎಲ್ಲಾ ಉಂಟು
ಅಂಗನವಾಡಿಗೆ ಬಹಳ ನಂಟು
ಮುಂದೆ ಹೋದರೆ ಪೋಸ್ಟಾಫೀಸು
ಹಿಂದೆ ಬಂದರೆ ಶಾಲೆ ಉಂಟು
ಬಲಗಡೆ ನೋಡು ಕುಂಬಾರನ ಮನೆ
ಎದುರಿಗೆ ಇರುವುದು ಆಸ್ಪತ್ರೆ ,
ಇದುವೆ ಅಂಗನವಾಡಿಯ ನೆರೆಹೊರೆ!

4.16. <u>ವಾರಕ್ಕೆ ಏಳು ದಿನ</u>

ವಾರಕ್ಕೆ ಏಳು ಏಳು ದಿನ
ಆದಿತ್ಯ ವಾರವೆ ರಜೆಯ ದಿನ
ಸೋಮವಾರ ಚಿನ್ನಿಯ ಕೋಲು
ಮಂಗಳವಾರವೆ ವಾಲಿಬಾಲು
ಬೇಟೆಯ ಆಟವು ಬುಧವಾರ
ಗರಡಿಯ ಮನೆಯಲಿ ಗುರುವಾರ
ಶುಕ್ರವಾರಕ್ಕೆ ಬುಗುರಿಯು ಚೆಂಡು
ಶನಿವಾರಕ್ಕೆ ಕ್ರಿಕೆಟ್ಟು ದಾಂಡು

ವಾರಕ್ಕೆ ಏಳು ದಿನ

ಆಟಕೆ ಸಾಲದು ರಜದ ದಿನ

## 4.17. <u>ವಾರಗಳು</u>

ಸೋಮವಾರ ಶಿವನ ದಿನ

ಸಿಹಿ ಸಿಹಿ ತಿಂಡಿ ತಿನ್ನುವ ದಿನ

ಮಂಗಳವಾರ ಮಂಗಳ ದಿನ

ಮಂಗಳ ಕಾರ್ಯ ನಡೆಯುವ ದಿನ

ಬುಧವಾರ ಬುದ್ಧಿವಂತರ ದಿನ

ಬುದ್ಧರಿಗೆ ವಂದಿಸುವ ದಿನ

ಗುರುವಾರ ಗುರುಗಳ ದಿನ

ಗುರುಗಳಿಗೆ ವಂದಿಸುವ ದಿನ

ಶುಕ್ರವಾರ ಅಲ್ಲಾನ ದಿನ

ಜುಮ್ಮ ನಮಾಜು ಓದುವ ದಿನ

ಶನಿವಾರ ಅರ್ಧ ದಿನ

ಅಂಗನವಾಡಿಯಿಂದ ಬೇಗ ಬರುವ ದಿನ

ಭಾನುವಾರ ಏಸುವಿನ ದಿನ

ಚರ್ಚ್‌ಗೆ ಹೋಗಿ ಬರುವ ದಿನ

ಭಾನುವಾರ ರಜೆಯ ದಿನ

## 4.18. <u>ಯಾವುದು ಚಂದ</u>

ಚಂದ ಚಂದ ಯಾವುದು ಚಂದ

ಬೆಳಗ್ಗೆ ಉಜ್ಜಿದ ಹಲ್ಲುಗಳು ಚಂದ

ಚಂದ ಚಂದ ಯಾವುದು ಚಂದ

ತಿಕ್ಕಿ ತೊಳೆದ ಮುಖವೆ ಚಂದ

ಚಂದ ಚಂದ ಯಾವುದು ಚಂದ

ಸೋಪು ಹಾಕಿ ತೊಳೆದ ಕೈಗಳೆ ಚಂದ

ಚಂದ ಚಂದ ಯಾವುದು ಚಂದ

ಚಪ್ಪಲಿ ಹಾಕಿದ ಕಾಲುಗಳೆ ಚಂದ

ಚಂದ ಚಂದ ಯಾವುದು ಚಂದ

ಒಗೆದ ಬಟ್ಟೆ ಹಾಕುವುದೇ ಚಂದ

ಚಂದ ಚಂದ ಯಾವುದು ಚಂದ

ಅಮ್ಮನು ಮಾಡಿದ ತಿಂಡಿ ಚಂದ

ಚಂದ ಚಂದ ಯಾವುದು ಚಂದ

ಅಂಗನವಾಡಿಗೆ ಬರುವ ಮಕ್ಕಳೇ ಚಂದ

### 4.19. <u>ದಿನಚರಿ</u>

ದಿನವೂ ಬೇಗ ಏಳಬೇಕು

ಎದ್ದು ಹಲ್ಲನ್ನು ಉಜ್ಜಬೇಕು

ಉಜ್ಜಿ ಮುಖವ ತೊಳಯಬೇಕು

ದಿನವೂ ಸ್ನಾನ ಮಾಡಬೇಕು

ದೇವರಿಗೆ ನಮಸ್ಕರಿಸಿ

ತಿಂಡಿಯ ತಿನ್ನಬೇಕು

ಗುರುವಿಗೆ ನಮಸ್ಕರಿಸಿ

ಅಂಗನವಾಡಿಯಲ್ಲಿ ಕಲಿಯಬೇಕು

### 4.20. <u>ವ್ಯಂಜನಗಳು</u>

ಕೆಂಪು ಕೋಟೆ ನೀಲಿಯಲ್ಲಿ – ಕ ಖ ಗ ಘ ಙ

ಚಂದಮಾಮ ಬಾನಿನಲ್ಲಿ – ಚ ಛ ಜ ಝ ಞ

ಟಗರಿಗೆ ಎರಡು ಕೊಂಬು ಉಂಟು – ಟ ಠ ಡ ಢ ಣ

ತಾತನ ಗಂಟು ದೊಡ್ಡದುಂಟು – ತ ಥ ದ ಧ ನ

ಪಾಪು ಮೊಗವು ಸುಂದರವಂತೆ – ಪ ಫ ಬ ಭ ಮ

ಯಾರಿಗುಂಟು ಯಾರಿಗಿಲ್ಲಾ – ಯ ರ ಲ ವ ಶ ಷ

4.21. <u>**ಅಕ್ಷರಗಳ ಹಾಡು**</u>

ಕತ್ತರಿ – ಕ

ಕಾಗೆ – ಕಾ

ಕಿಡಕಿ – ಕಿ

ಕೀಲಿ – ಕೀ

ಕುದುರೆ –ಕು

ಕೂಸಿನ – ಕೂ

ಕೇದಿಗೆ – ಕೇ

ಕೆರೆ – ಕೆ

ಕೈ – ಕೈ


ಕೋಳಿ – ಕೋ

ಕೋಲೆ – ಕೋ

ಕೌದಿ – ಕೌ

ಕಂಬಳಿ – ಕಂ

ಕಃ – ಕಃ



## 4.22. <u>ಆಕಾರ</u>

ಬನ್ನಿ ಬನ್ನಿ ಮಕ್ಕಳೆ

ಶಿಶು ವಿಹಾರಕ್ಕೆ ಹೋಗುವ

ಆಟವನ್ನು ಆಡುವ

ಪಾಠವನ್ನು ಕಲಿಯುವ

ಶಿಸ್ತಿನಿಂದ ಸಾಲಾಗಿ ನಾವೆಲ್ಲಾ ನಿಲ್ಲುವ

ಕೈಯನ್ನು ಜೋಡಿಸಿ ಗುರುಗಳಿಗೆ ನಮಿಸುವ

ಒಬ್ಬರ ಕೈಯಿ ಒಬ್ಬರು ಹಿಡಿದು

ವೃತ್ತದಲ್ಲಿ ಸಾಗುವ

ಒಬ್ಬರಿಗೊಬ್ಬರು ಸಹಾಯ ಮಾಡಿ

ಒಗ್ಗಟ್ಟಿನಿಂದ ಬಾಳುವ

ಅತ್ತ ಇತ್ತ ಸಾಗುವ ಮೊದಲು

ಮೂರು ಮೂಲೆಗೆ ಹೋಗುವ

ತ್ರಿಕೋಣಾಕಾರ ಹಾಕಿ ನಾವು


ಜೈಕಾರ ಹಾಕುವ. ಜೈಕಾರ ಹಾಕುವ

ನಾಲ್ಕು ದಿಕ್ಕಿನಿಂದ ಬಂದು

ಚೌಕಟ್ಟಿನಲ್ಲಿ ನಿಲ್ಲುವ

ಅಚ್ಚುಕಟ್ಟಾಗಿ ನಿಂತು ನಾವು

ಸಹಬಾಳ್ವೆ ನಡೆಸುವ



# ೫. ನಮ್ಮ ಪರಿಸರ

## ೫.೧. ಗಿಡ–ಮರ

ಗಿಡಗಳು ಗಿಡಗಳು ಹಸಿರು ಚಲ್ಲುವ ಗಿಡಗಳು

ಕಾಡಿನಲ್ಲಿ ನಾಡಿನಲ್ಲಿ ಹುಟ್ಟುವ ಗಿಡಗಳು

ಗಿಡ ಹುಟ್ಟಿ ಮರವಾಗಿ ಎಲ್ಲರಿಗೂ ನೆರಳಾಗಿ

ತಂಪನ್ನು ಕೊಡುವೆ,

ಮುಂಗಾರು ಗುಡುಗಿನಲ್ಲಿ ಎಲೆ ಉದುರಿ ಬಾಡೋಗುವೆ,

ವಸಂತ ಕಾಲದಲಿ ಎಲೆ ಚಿಗುರಿ ಕಂಗೊಳಸುವೆ

## ೫.೨. ಗಿಡಮರ

ಗಿಡಮರ ಬೆಳೆಸುವ ನಾವೆಲ್ಲಾ

ಗಿಡಮರ ಉಳಸುವ ನಾವೆಲ್ಲಾ

ಗಿಡಮರ ರಕ್ಷಿಸಿ ಪೋಷಿಸುವ ನಾವೆಲ್ಲಾ

ಗಿಡಮರ ಇದ್ದರೆ ನಾವೆಲ್ಲಾ

ಗಿಡಮರ ಇಲ್ಲದಿದ್ದರೆ ನಾವಿಲ್ಲಾ

ಗಿಡಮರ ಇದ್ದರೆ ಮಳೆ ಬೆಳೆ

ಗಿಡಮರ ಇಲ್ಲದಿದ್ದರೆ ಮಳೆ–ಬೆಳೆಯಿಲ್ಲಾ

ಗಿಡಮರ ಇದ್ದರೆ ನೀರು

ಗಿಡಮರ ಇಲ್ಲದಿದ್ದರೆ ನೀರಿಲ್ಲಾ

ಗಿಡಮರ ಇದ್ದರೆ ಜಗವು

ಗಿಡಮರ ಇಲ್ಲದಿದ್ದರೆ ಜಗವಿಲ್ಲಾ





**5.3. <u>ಗಾಳಿ–ಬೆಳಕು</u>**

ಗಾಳಿ ಗಾಳಿ ತಣ್ಣನೆ ಗಾಳಿ
ಬೆಳಕು ಬೆಳಕು ಚಿನ್ನದ ಬೆಳಕು
ನಿಮ್ಮನು ಬಿಟ್ಟು ನಾ ಬದುಕಲಾರೆ
ನೀವಿಬ್ಬರು ಇಲ್ಲದೇ ಬಾಳುವರು ಯಾರೇ?

**5.4. <u>ತಂಗಾಳಿ</u>**

ಗಾಳಿ ಗಾಳಿ ತಂಗಾಳಿ
ಮಾವಿನ ಮರಗಳು ಅಲ್ಲಾಡಿ
ಮಾವಿನ ಕಾಯಿ ಚೆಲ್ಲಾಡಿ
ನನಗೊಂದು ಹಣ್ಣು
ನಿನಗೊಂದು ಹಣ್ಣು
ಟಪ್ ಟಪ್ ಟಪ್

**5.5. <u>ಆರೋಗ್ಯ</u>**

ಶುದ್ಧ ಗಾಳಿ ಬೆಳಕು ನೀರು
ಸ್ವಚ್ಛ ಬಟ್ಟೆ ನಿತ್ಯ ಸ್ನಾನ
ಇದುವೆ ನಮ್ಮ ಜೀವನದ ಆಸರೆ
ಕೆಟ್ಟ ಗಾಳಿ ನೀರು ಕೊಳಕು ಬಟ್ಟೆ
ಇದುವೆ ರೋಗಕ್ಕೆ ಆಸರೆ




**5.6. <u>ದಿಕ್ಕುಗಳು</u>**

ದಿಕ್ಕುಗಳಿರುವುದು ನಾಲ್ಕೇ ನಾಲ್ಕು
ಮಕ್ಕಳೇ ನಿಮಗೆ ಗೊತ್ತಿರಬೇಕು
ಸೂರ್ಯನು ಮೂಡುವ ದಿಕ್ಕೇ ಪೂರ್ವ
ಮುಳುಗುವ ದಿಕ್ಕೇ ಪಶ್ಚಿಮವು
ಪೂರ್ವದ ಎದುರು ಬಲಗಡೆ ದಕ್ಷಿಣ
ಎಳೆಯರ ಎಡಗಡೆ ಉತ್ತರವು

## 5.7. ಭೂಮಿ

ಭೂಮಿತಾಯಿ
ನಿನ್ನ ಮಡಿಲ ಮಗು
ನೋಡಿ ನಾನು ಸುಖಿಸುವೆ
ನಿನ್ನ ಮುಡಿಯ ಹೂವ
ನೋಡಿ ಮುದದಿ ಪಾಡುವೆ
ನಿನ್ನ ಮಡಿಲಲಾಡಿ
ನಾನು ಬೆಳೆಯುವೆ
ನಿನ್ನ ಸೇವೆ ಮಾಡಿ
ನಾನು ಧನ್ಯನಾಗುವೆ
ಭೂಮಿ ತಾಯೇ ನಿನಗೆ ನಮನವು
ಮತ್ತೆ ಮತ್ತೆ ನಮನವು
ಮೇಲೆ ಮೇಲೆ ಮೇಲೆ
ಕೆಳಗೆ ಕೆಳಗೆ ಕೆಳಗೆ
ಮೇಲೆ ಮೇಲೆ ಆಕಾಶ
ಕೆಳಗೆ ಕೆಳಗೆ ಭೂಮಿ



## 5.8. ನಾವೆಲ್ಲ ಪುಷ್ಪಗಳು


ನಾವೆಲ್ಲ ಪುಷ್ಪಗಳು ಪರಿಮಳವ ಬೀರುವೆವು
ಸಂತಸವು ತೋರುವೆವು ಇಂದಿನಾದಿನ
ನಾನು ಮಲ್ಲಿಗೆ ಬಹಳ ಬೆಳ್ಳಗೆ
ನನ್ನಷ್ಟು ಬೆಳ್ಳಗೆ ಬೇರೆಲ್ಲೂ ಸಿಕ್ಕದು
ನಾನು ಗುಲಾಬಿ ಬಹಳ ಸುಂದರಿ
ತನ್ನಷ್ಟು ಸುಂದರಿ ಬೇರೆಲ್ಲೂ ಸಿಕ್ಕದು
ನಾನು ಸೇವಂತಿಗೆ ಬಹಳ ದುಂಡಗೆ
ನನ್ನಷ್ಟು ದುಂಡಗೆ ಮತ್ತೆಲ್ಲೂ ಸಿಕ್ಕದು
ನಾನು ಕಮಲ ಬಹಳ ಕೋಮಲ
ನನ್ನಷ್ಟು ಕೋಮಲ ಬೇರೆಲ್ಲೂ ಸಿಕ್ಕದು

### 5.9. <u>ಗುಲಾಬಿ</u>

ಚಿಕ್ಕ ಚಿಕ್ಕ ಗುಲಾಬಿ ಹೂವೆ
ಬಿಸಿಲಲಿ ಕುಳಿತು ಏಕೆ ಅಳುವೆ
ಎದ್ದೇಳು ಮೇಲೆ ಸುತ್ತ ಮುತ್ತ ತಿರುಗು
ಯಾರು ಬೇಕೋ ಆರಿಸಿಕೊ

### 5.10. <u>ಹೂಗಳ ರಾಣಿ – ಗುಲಾಬಿ</u>

ಹೂಗಳ ರಾಣಿ ನನ್ನ ನೋಡಿ
ಅಂದವಾದ ಬಣ್ಣ ನೋಡಿ ।
ಎಲೆಗಳ ನಡುವೆ ಮುಳ್ಳುಗಳ ನಡುವೆ
ಕುಳಿತಿಹ ನನ್ನ ಬಗ್ಗಿ ನೋಡಿ
ಕೆಂಪು ಗುಲಾಬಿ ಪುಷ್ಪ ನಾನು
ಹೆಣ್ಣುಗಳಿಗೆಲ್ಲಾ ಇಷ್ಟ ನಾನು
ಜಡೆಯಲ್ಲಿ ಮುಡಿದು ಸಂತಸದಿಂದ
ನಡೆವರು ಹೀಗೆ ಇಲ್ಲಿ ನೋಡಿ
ಹೂಗಳ ರಾಣಿ ನನ್ನನು ನೋಡಿ
ಅಂದವಾದ ಬಣ್ಣ ನೋಡಿ



### 5.11. <u>ಮಳೆ</u>

ಮಳೆ ಬಂತು ಮಳೆ
ಕೊಡೆ ಹಿಡಿದು ನಡೆ
ಜಾರಿಬಿದ್ದರೆ ಮಣ್ಣಿನಲ್ಲಿ
ಬಟ್ಟೆಯೆಲ್ಲಾ ಕೊಳೆ
ಬಿಸಿಲು ಬಂತು ಬಿಸಿಲು
ಕೋಟು ಟೋಪಿ ತೆಗೆ
ಬಾವಿಯಿಂದ ನೀರು ಸೇದಿ
ಸೋಪು ಹಾಕಿ ಒಗೆ

### 5.12. <u>ಮಳೆರಾಯ</u>

ಹುಯ್ಯೋ ಹುಯ್ಯೋ ಮಳೆರಾಯ
ಗುಬ್ಬಿಗೆ ಕುಡಿಯಲು ನೀರಿಲ್ಲಾ
ಕಾಗೆಗೆ ಕುಡಿಯಲು ನೀರಿಲ್ಲಾ
ಗದ್ದೆಗೆ ಹಾಸಲು ನೀರಿಲ್ಲಾ
ತೊಟ್ಟಕೆ ಹಾಸಲು ನೀರಿಲ್ಲಾ
ಹುಯ್ಯೋ ಹುಯ್ಯೋ ಮಳೆರಾಯ



### 5.13. <u>ಮಳೆ</u>

ಮಳೆ ಬಂತು ಮಳೆ ಬಂತು ಟಪ್ ಟಪ್ ಟಪ್
ತಲೆ ನೆನೆದಾಯ್ತು ಟಪ್ ಟಪ್ ಟಪ್
ಕೈ ನೆನೆದಾಯ್ತು ಟಪ್ ಟಪ್ ಟಪ್
ಬಟ್ಟೆ ನೆನೆದಾಯ್ತು ಟಪ್ ಟಪ್ ಟಪ್
ಅಬ್ಬಾ ಅಬ್ಬಬ್ಬಾ ಚಳಿಯಾಯಿತು ಟಪ್ ಟಪ್ ಟಪ್
ನಿದ್ದೆ ಬಂತು, ನಿದ್ದೆ ಬಂತು ಟಪ್ ಟಪ್ ಟಪ್

## 5.14. <u>ಮಳೆ</u>

ಬೊರ್ ಬೊರ್ ಎಂದು ಮಳೆ ಬಂತು

ಡುಮ್ಮ ಶಾಲೆಗೆ ಹೊರಟಿದ್ದ

ಕೆಸರಲ್ಲಿ ಕಾಲಿಟ್ಟು ಜಾರಿ ಬಿದ್ದ

## 5.15. <u>ವೇಳೆ ಮತ್ತು ಋತುಗಳು</u>

ಗಂಟೆಯ ನಂಟಿಗೆ

ಓ ಗಡಿಯಾರ

ಸಮಯದ ತಿಳಿಯಲು

ನೀ ಆಧಾರ

ಸದ್ದನು ಮಾಡುವೆ

ನೀ ಗಡಿಯಾರ ನಿನಗಿದು ಸರಿಯೇ

ಓ ಗಡಿಯಾರ

## 5.16. <u>ಕಾಮನಬಿಲ್ಲು</u>

ಕೆಂಪು ಬಿಳಿ ಬಣ್ಣಾ ನೋಡುಬಾರಣ್ಣ

ಮೇಲೆ ನೋಡು ಆಕಾಶ

ಅದರಲ್ಲಿದೆ ಕಾಮನಬಿಲ್ಲು, ಅದಕೆ ಉಂಟು 7 ಬಣ್ಣ

ನೇರಳೆ, ನೀಲಿ, ಹಸಿರು, ಹಳದಿ

ಕಿತ್ತಳೆ, ಕೆಂಪು ಬಣ್ಣ ನೋಡುಬಾರಣ್ಣ

ಇದು ಎಂದ ಚಂದ ನೋಡುಬಾರಣ್ಣ



5.17. **ಚಂದಕಿ ಮಾಮ**

ಚಂದಕ್ಕಿ ಮಾಮ ಚಕ್ಕುಳಿ ಮಾಮ

ಮುತ್ತಿನ ಕುಡಿಕೆ ಕೊಡುಮಾಮ

ತೆಳ್ಳಗೆ ಹಪ್ಪಳದಂತಿರುವೆ


ಬೆಳ್ಳಗೆ ದೋಸೆಯ ಹಾಗಿರುವೆ

ಕಿತ್ತಳೆ ಕೊಡುವೆ ಬಾ ಕೆಳಗೆ

ಮುತ್ತನು ಕೊಡುವೆ ಬಾ ಬಳಗೆ

ಚಂದಕಿ ಮಾಮ ಚಕ್ಕುಳಿ ಮಾಮ

ಮುತ್ತಿನ ಕುಡಿಕೆ ಕೊಡು ಮಾಮ



5.18. **ಚಂದ ಮಾಮ**

ಚಂದ ಮಾಮ ಓಡಿ ಬಾ

ಚಂದದಿಂದ ಆಡು ಬಾ

ಬಂದು ಒಡನಾಡು ಬಾ

ಮುಂದೆ ಮುಂದೆ ಓಡಿ ಬಾ

ಸಕ್ಕರೆ ಕಟ್ಟಿ ತರ್ತಿನಿ, ಮಿಕ್ಕರೆ ನಿಂಗೂ ಕೊಡ್ತೀನಿ

ನಕ್ಕರೆ ನಾನು ನಗ್ತೀನಿ, ಅತ್ತರೆ ನಾನು ಅಳ್ತೀನಿ

ಎಲ್ಲಿಗೆ ಹೋದರೂ ಬರ್ತೀಯಾ, ಅಲ್ಲೇ ದೂರದಲಿ ಇರ್ತೀಯಾ

ಮೆಲ್ಲಗೆ ಸಣ್ಣಗೆ ಆಗ್ತಿಯಾ, ಹಿಂದೆ ಮುಂದೆ ಹೋಗ್ತಿಯಾ ॥ಚಂದಮಾಮ॥

5.19. <u>ನಕ್ಷತ್ರ</u>


ಮಿನುಗಲೆ ಮಿನುಗಲೆ ನಕ್ಷತ್ರ
ಮೀರಿ ಮೀರಿ ಮಿನುಗುವ ನಕ್ಷತ್ರ
ಆಗಸದಲ್ಲಿ ನೀನಿರುವೆ ಭೂಮಿಯ ಮೇಲೆ ನಾನಿರುವೆ
ಮಿನುಗುವ ವೇಳೆ ನೀ ಬರುವೆ
ಹಗಲಿನ ವೇಳೆ ನಾ ಬರುವೆ ॥ಮಿನುಗಲೆ॥
ಚಂದ್ರನ ಬಳಿಯಲಿ ನೀನಿರುವೆ
ಅಮ್ಮನ ಬಳಿಯಲಿ ನಾನಿರುವೆ ॥ಮಿನುಗಲೆ॥
ನಕ್ಷತ್ರಗಳ ನಡುವೆ ನೀನಿರುವೆ
ಅಂಗನವಾಡಿಯಲ್ಲಿ ನಾನಿರುವೆ ॥ಮಿನುಗಲೆ॥



# 6. ಪ್ರಾಣಿಗಳು

**6.1. ಕುದುರೆ**

ಚಲ ಚಲ್ ಕುದುರೆ ಚಾಲಾಕು ಕುದುರೆ
ರಾಜ ಹತ್ತೊ ರಂಗಿನ ಕುದುರೆ,
ರಾಣಿ ಹತ್ತೊ ಕೀಲು ಕುದುರೆ,
ರಾಜಕುಮಾರ ಹತ್ತೋ ರಂಗದ ಕುದುರೆ




**6.2. ನಾಯಿಮರಿ**

ನಾಯಿಮರಿ ನಾಯಿಮರಿ ತಿಂಡಿ ಬೇಕೆ?
ತಿಂಡಿ ಬೇಕು ತೀರ್ಥ ಬೇಕು ಎಲ್ಲಾ ಬೇಕು
ನಾಯಿ ಮರಿ ನಿನಗೆ ತಿಂಡಿ ಏಕೆ ಬೇಕು
ತಿಂದು ಗಟ್ಟಿಯಾಗಿ ಮನೆಯ ಕಾಯಬೇಕು
ನಾಯಿಮರಿ ಕಳ್ಳ ಬಂದರೆ ಏನು ಮಾಡುವೆ?
ಬೌ ಬೌ ಬೌ ಬೌ ಎಂದು ಕೂಗುವೆ

**6.3. ನಮ್ಮ ಮನೆಯ ನಾಯಿ**

ನಮ್ಮ ಮನೆಯ ನಾಯಿ
ಮನೆಯ ಕಾಯುವ ನಾಯಿ ॥ ನಮ್ಮ ಮನೆಯ... ॥
ಕಪ್ಪು ಬಣ್ಣದ ನಾಯಿ ॥ ನಮ್ಮ ಮನೆಯ... ॥
ದಿನವೂ ಬೊಗಳುವ ನಾಯಿ ॥ ನಮ್ಮ ಮನೆಯ ॥
ಅಂದದಿ ಕಾಣುವ ನಾಯಿ ॥ ನಮ್ಮ ಮನೆಯ ॥
ಸ್ವಾಮಿ ನಿಷ್ಠೆಯ ನಾಯಿ ॥ ನಮ್ಮ ಮನೆಯ ॥
ನಿಯಮ ಮೀರದ ನಾಯಿ ॥ ನಮ್ಮ ಮನೆಯ ॥
ಕಳ್ಳರ ಹಿಡಿಯುವ ನಾಯಿ ॥ ನಮ್ಮ ಮನೆಯ ॥



6.4. <u>ನಾಯಿ ನರಿ ಮದುವೆ</u>

ನಾಯಿ ನರಿ ಮದುವೆ
ನಾಯಿ ನರಿ ಸೇರಿತು
ಮದುವೆ ಜೋರು ಆಯಿತು
ಕುದುರೆ ಕುಣಿತ ಸಾಗಿತು
ಕಾಗೆ ಕಾಕಾ ಎಂದಿತು
ಗುಬ್ಬಿ ತಾಳ ಹಾಕಿತು
ಮಂಗ ಡೋಲು ಬಡೆಯಿತು
ಕತ್ತೆ ಮೇಳ ಊದಿತು
ಮಳೆಯು ಜೋರಾಗಿ ಬಂದಿತು

6.5. <u>ಆನೆ</u>

ಆನೆ ಬಂತೊಂದು ಆನೆ
ಯಾವ ಊರ ಆನೆ
ಬಿಜಾಪುರದ ಆನೆ
ಇಲ್ಲಿಗ್ಯಾಕೆ ಬಂತು
ದಾರಿ ತಪ್ಪಿ ಬಂತು
ಕೊಬ್ಬರಿ ಬೆಲ್ಲ ತಂತು
ಮಕ್ಕಳಿಗೆಲ್ಲಾ ಹಂಚಿತು
ಆನೆ ಓಡಿ ಹೋಯಿತು

6.6. <u>ಆನೆ</u>

ಆನೆ ಬಂತು ಆನೆ, ನೋಡ ಬನ್ನಿ ಆನೆ,
ದೊಡ್ಡ ಹೊಟ್ಟೆ ಆನೆ, ಕಪ್ಪು ಬಣ್ಣದ ಆನೆ
ಸಣ್ಣ ಕಣ್ಣಿನ ಆನೆ, ಅಗಲ ಕಿವಿಯ ಆನೆ
ಚೂಪು ದಂತದ ಆನೆ, ಉದ್ದ ಸೊಂಡಿಲ ಆನೆ
ಗಿಡ್ಡ ಕಾಲಿನ ಆನೆ, ಚೋಟು ಬಾಲದ ಆನೆ
ಶಕ್ತಿಶಾಲಿ ಆನೆ, ಬಂತು ಬಂತು ಆನೆ, ನೋಡ ಬನ್ನಿ ಆನೆ

**6.7. <u>ನನ್ನ ದೇಹ</u>**

ನನ್ನ ದೇಹ ದೊಡ್ಡದು

ನನ್ನ ಕಣ್ಣು ಚಿಕ್ಕದು

ನನ್ನ ಕಿವಿ ಅಗಲದು

ನನ್ನ ಮೂಗು ಉದ್ದದು


ನನ್ನ ಬಾಲ ಗಿಡ್ಡದು

ನಾನು ಯಾರು ಹೇಳಯ್ಯಾ?

ನಾನು ಯಾರು ಹೇಳಮ್ಮ?

ಯಾರದು ಹೇಳ??

**ಆನೆ!!**



**6.8. <u>ಆನೆ</u>**

ಆನೆ ಬಂತು ಆನೆ

ನೋಡ ಬನ್ನಿ ಆನೆ

ದೊಡ್ಡ ಹೊಟ್ಟೆಯಾನೆ

ಕಪ್ಪು ಬಣ್ಣದಾನೆ

ಸಣ್ಣ ಕಣ್ಣಿನಾನೆ

ಅಗಲ ಕಿವಿಯ ಆನೆ

ಉದ್ದ ಸೊಂಡಿಲಾನೆ

ಚೂಪು ದಂತದಾನೆ

ಮೋಟು ಬಾಲದಾನೆ

ಶಕ್ತಿಶಾಲಿ ಆನೆ

**6.9. <u>ಇಲಿ ಮರಿಯ ಕನಸು</u>**

ಇಲಿಮರಿಗೆ ಬಲು ನಿದ್ದೆ, ನಿದ್ದೆಯಲಿ ಕನಸು

ಕನಸಿನಲಿ ಕಂಡಿತ್ತು, ಬಗೆ ಬಗೆಯ ತಿನಿಸು

ತಟ್ಟೆ ತಟ್ಟೆಗಳಲ್ಲಿ, ರೊಟ್ಟಿ ಬಿಸ್ಕತ್ತು,

ತಿಂದಷ್ಟು ಮುಗಿಯದು, ಎಷ್ಟು ಗಮ್ಮತ್ತು

6.10. <u>ಇಲಿ ಮರಿ</u>

ಇಲಿ ಮರಿ ಇಲಿ ಮರಿ ಚಿರಿಪಿರಿ
ಅಡುಗೆ ಮನೆಯಲ್ಲಿ ಗಲಿಬಿಲಿ
ಕೋಣೆ ಒಳಗೆ ಸರಪರ
ಏನನ್ನು ಕೊರೆಯುವೆ ಕರ ಕರ
ಸಕ್ಕರೆ ಹೋಳಿಗೆ ಕುರಿ ಕುರಿ
ಕಂಡರೆ ಹಿಗ್ಗುವೆ ಹಿರಿ ಹಿರಿ
ಬೆಕ್ಕನ್ನು ನೋಡಲು ತರ ತರ
ನಡುಗುತ್ತ ಓಡುವೆ ಭರ ಭರ

6.11. <u>ಅಕ್ಕ–ಬೆಕ್ಕು–ಸೊಕ್ಕು</u>

ಅಕ್ಕನಿಗಿರಿಸಿದ ಸಕ್ಕರೆ ಹಾಲನು
ನೆಕ್ಕುತ ಕುಡಿಯಿತು ಬೆಕ್ಕು
ಬಿಕ್ಕುತ ಬಿಕ್ಕುತ ಅಕ್ಕ ಎಂದಳು
ಬೆಕ್ಕೇ ನಿನಗೆ ಬಲು ಸೊಕ್ಕು

6.12. <u>ಬೆಕ್ಕು</u>

ಬೆಕ್ಕು ಬೆಕ್ಕು ಬೇಗ ಬಾ
ಬೆಣ್ಣೆ ಮುದ್ದೆ ತಿಂದು ಬಾ
ಕದ್ದು ಹಾಲು ಕುಡಿದು ಬಾ
ತಿಂದು ತೇಗಿ ಜಿಗಿಯ ಬಾ
ಎದ್ದು ಬಿದ್ದು ಓಡಿ ಬಾ
ಮಂಚವನೇರಿ ಮಲಗು ಬಾ



6.13. <u>ಕಳ್ಳ ಬೆಕ್ಕು</u>

ಕರಿಯ ಕಳ್ಳ ಬೆಕ್ಕು
ಅಡುಗೆ ಮನೆಗೆ ಹೊಕ್ಕು
ಇದ್ದ ಹಾಲೆಲ್ಲಾ ಕುಡಿಯಿತಲ್ಲಾ
ಅದಕ್ಕೆ ಬಹಳ ಸೊಕ್ಕು

6.14. **ನರಿ-ದ್ರಾಕ್ಷಿ**

ನರಿಯು ತೋಟಕೆ ಹೋಯಿತು, ನರಿಯು ತೋಟಕೆ ಹೋಯಿತು

ನೋಟ ನೋಡಲು ನೋಟ ನೋಡಲು

ನೋಡಿತೇನದು ನೋಡಿತೇನದು

ಚಪ್ಪರದಿಂದ ತೂಗಿದ ದ್ರಾಕ್ಷಿ ಗೊಂಚಲು

ಮಾಡಿತೇನದು ಮಾಡಿತೇನದು

ಒಂದು ಸಾರಿ ಎಗರಿತು

ಎರಡು ಸಾರಿ ಎಗರಿತು

ಸೋತು ಹೋಯಿತು

ಹೇಳಿತೇನದು ಹೇಳಿತೇನದು

ದ್ರಾಕ್ಷಿ ಹುಳಿ ಎಂದಿತು

ದ್ರಾಕ್ಷಿ ಹುಳಿ ಎಂದಿತು

ಮರಳಿ ಮನೆಗೆ ಹೋಯಿತು ॥2॥

6.15. **ಅಳಿಲೆ**

ಅಳಿಲೆ ಅಳಿಲೆ

ಚುಮ್ ಚುಮ್ ಅಳಿಲೆ

ಮರದಿಂದ ಇಳಿದು ಬಾ ಬಾ ನಲಿದು

ಬಾರೋ ಬೇಗ ಹಾಕೋ ಲಾಗ

ಬಂದರೆ ಕೊಡುವೆ ಬಾರದಿದ್ದರೆ ತಿನ್ನುವೆ

ಬಾರೋ ಬೇಗ ಹಾಕೋ ಲಾಗ



6.16. **ಮೊಲ**


ಮೊಲದ ಮರಿ ಮೊಲದ ಮರಿ ಹಾಡು ಬಾರೆ
ಚುಬಕಿ ಚುಬಕಿ ಚುಬಕಿ ಎಂದು ನಲಿದು ಬಾರೆ
ದೊಡ್ಡದಾದ ಕಾಡಿನಲ್ಲಿ ನಿನ್ನ ಠಾವೆ
ಹೆಡ್ಡ ನೀನು ಪೊದರಿನಲ್ಲಿ ವಾಸಿಸುವೆ
ಗಿಡದ ಹಸಿರು ಚಿಗುರು ನಿನ್ನ ಸೊಗಸಿನೂಟ
ಅಗಲ ಕಿವಿ ಗಿಡ್ಡ ಬಾಲ ನಿನಗೆ ಚಂದ

6.17. **ಹೆದರಿಕೆ**

ಪಟ್ಟೆ ಪಟ್ಟೆ ಹುಲಿಯ ಕಂಡು ನಾನು ಹೆದರಿದೆ
ಡೊಳ್ಳು ಹೊಟ್ಟೆ ಆನೆ ಕಂಡು ನಾನು ಬೆದರಿದೆ
ಗರ್ಜಿಸುವ ಸಿಂಹವ ಕಂಡು ನಾನು ನಡುಗಿದೆ
ನನ್ನ ಕಂಡು ಮರದಲ್ಲಿದ್ದ ಮಂಗ ಬೆದರಿತು

6.18. **ಚಂದವೊ ಚಂದ**

ನಾಗರ ಹಾವಿನ ಹೆಡೇ ಚಂದ
ಜಿಂಕೆಯ ಮರಿಯ ಕೋಡು ಅಂದ
ಮಾತನಾಡೋ ಗಿಣಿ ಮಾತೇ ಅಂದ
ಮುದ್ದಿನ ಮಕ್ಕಳ ನೋಟವೆ ಅಂದ
ಚಂದವೊ ಚಂದ ಎಲ್ಲವೋ ಚಂದ
ಎಲ್ಲರೂ ಒಟ್ಟಿಗೆ ಆಡೋದು ಅಂದ



### 6.19. <u>ಬಸವಣ್ಣ</u>

ಬಾರೋ ಬಾರೋ ಬಸವಣ್ಣ

ಬಣ್ಣದ ಗಿಲಿಕಿಯ ತಾರಣ್ಣ

ನೇಗಿಲು ಹೊರಲು ಏಳಣ್ಣ

ಹೇಳಿದ್ದು ಸರಿಯೆಂದು ತಿಳಿಯಣ್ಣ

ಬಾರೋ ಬಾರೋ ಬಸವಣ್ಣಾ


### 6.20. <u>ಹುಲಿ</u>

ಹುಲಿಯಣ್ಣ ಹುಲಿಯಣ್ಣ

ಕಾಡಿಗೆ ನೀನು ಹಿರಿಯಣ್ಣ

ಆದರೂ ನೀನು ಕಾಡಲಿರು

ಊರಿಗೆ ಮಾತ್ರ ಬಾರದಿರು



### 6.21. <u>ಕರಡಿ ಬೆಟ್ಟಕೆ ಹೋಯಿತು</u>

ನೋಡಿತೇನದು? ನೋಡಿತೇನದು

ಆಕಡೆ ಗುಡ್ಡದ ಭಾಗ, ಈಕಡೆ ಗುಡ್ಡದ ಭಾಗ

ಮಾಡಿತೇನದು, ಮಾಡಿತೇನದು

ಹಲಸಿನ ಹಣ್ಣು ತಂದಿತು

ಜೇನು ಅದಕ್ಕೆ ಬೆರಸಿತು

ಹೊಟ್ಟೆ ತುಂಬ ತಿಂದಿತು

ಓಡಿ, ಓಡಿ, ಹೋಯಿತು

### 6.22. <u>ಕುರಿ–ಹುಲಿ</u>

ಕುರಿಮರಿ ಬ್ಯಾ
ಮುದ್ದುಮರಿ ಬ್ಯಾ
ಕಾಡಿನಲ್ಲಿ ದಾರಿತಪ್ಪಿ
ಕೂಗಿತಮ್ಮ ಬ್ಯಾ ॥2॥
ಟಂ ಟಂ ಟಂ
ಪಟ್ಟೆ ಹುಲಿ ಹೋಂ
ಕುರಿಯ ಕಣ್ಣು ಹೋಂ
ಕುರಿಯ ತಿನ್ನಲೆಂದು ಹುಲಿ
ಹಾರಿ ಬಂತು ಧಂ
ಬೇಡ ಬಂದ ಚಂ
ಬಿಟ್ಟು ಬಾಣ ಡಂ
ಬಾಣ ತಗುಲಿ ಬಿತ್ತು ಹುಲಿ
ಕಾಡ ಹುಲಿ ಡಂ

### 6.23. <u>ಹೋರಿ</u>

ಢಂ ಢಂ ಢಿಗಾರಿ
ಹೊಡೀ ನಗಾರಿ
ಓಡಿ ಬರುತ್ತಿದ್ದ ಹೋರಿ
ಸೀನು ಹುಷಾರಿ
ನಾಣಿ ಪರಾರಿ
ಸುಬ್ಬು ಕಿತ್ತನು ಫೇರಿ

### 6.24. <u>ಮಂಗಣ್ಣ</u>

ಗೇರ್ ಗೇರ್ ಮಂಗಣ್ಣ

ಕಡ್ಲೆಕಾಯಿ ನುಂಗಣ್ಣ

ಕೊಂಬೆಯಿಂದ ಕೊಂಬೆಗೆ

ಹೈ ಜಂಪ್ ಮಾಡೊ ಹನುಮಣ್ಣ

### 6.25. <u>ಮಂಗಣ್ಣಾ</u>

ನಾನು ಒಬ್ಬ ಮಂಗಣ್ಣಾ

ನನಗೆ ಉಂಟು ಬಾಲ

ನಾನು ಹಾಕುವೆ ಲಾಗ

ನಾನು ಹಾಕುವೆ ಲಾಗ

ಹಣ್ಣು ಗಿಣ್ಣು ತಿನ್ನುವೆ

ಸಿಪ್ಪೆ ಗಿಪ್ಪೆ ಉಗಿಯುವೆ

ಕುರುಡನಂತೆ ನಟಿಸುವೆ

ಕಾಸುಗೀಸು ಬೇಡುವೆ



### 6.26. <u>ಕೋತಿಮಾಮ</u>

ಕೋತಿ ಮಾಮ ಮದುವೆಗೆ ಹೋದ

ಟೋಪಿ ಚಪ್ಪಲಿ ಹಾಕಿಕೊಂಡು ಹೋದ

ಶರ್ಟು ಪ್ಯಾಂಟು ಹಾಕಿಕೊಂಡು ಹೋದ

ಬಿಸಿ ಬಿಸಿ ಪಾಯಸ ಘಟ–ಘಟಾ ಕುಡಿದ

ನಾಲಿಗೆ ಸುಟ್ಟು ಹೋಯಿತು ಕೋಪ ಬಂತು

ಟೋಪಿ ಎಸೆದ, ಶರ್ಟು ಎಸೆದ


ಪ್ಯಾಂಟು ಎಸೆದ, ಚಪ್ಪಲಿ ಎಸೆದ

ಅಳುತ್ತಾ ಹೋದಾ!

# 7. ಪಕ್ಷಿಗಳು

## 7.1. ಗಿಣಿ

ಗಿಣಿಯೇ ಗಿಣಿಯೇ ಪಂಚರಂಗಿ ಗಿಣಿಯೇ
ಹಸಿರು ಗಿಣಿಯೇ ಹಾರುವ ಗಿಣಿಯೇ
ರಂಗಿನ ಗಿಣಿಯೇ ರಾಮ ಗಿಣಿಯೇ



## 7.2. ಗಿಳಿ

ಗಿಳಿ ಬಂತು ಗಿಳಿ
ಬಾಯಲ್ಲಿ ಒಂದು ಮಣಿ
ಹೇಳತೊಂದು ಕಣಿ
ಬಿದ್ದು ಹೋಯಿತ ಮಣಿ
ಹಾರಿ ಹೋಯಿತು ಗಿಳಿ

## 7.3. ಗಿಣಿಯೇ ಗಿಣಿಯೇ

ಗಿಣಿಯೇ ಗಿಣಿಯೇ, ಬಣ್ಣದ ಗಿಣಿಯೇ
ಹಣ್ಣನು ಕೊಡುವೆ ಬಾ ಬಾ ಬಾ
ಹಸಿರು ಪುಕ್ಕದ ಬಣ್ಣದ ಗಿಣಿಯೇ
ಹಾಡನು ಕಲಿಸು ಬಾ ಬಾ ಬಾ
ಹಣ್ಣನು ಕೊಟ್ಟು, ಹಾಲನು ಕೊಟ್ಟು
ನೀರನು ಕುಡಿಸುವೆ ಬಾ ಬಾ ಬಾ
ಗಿಣಿಯೇ ಗಿಣಿಯೇ ಬಣ್ಣದ ಗಿಣಿಯೇ
ಹಾರುತ ಬಳಗೆ ಬಾ ಬಾ ಬಾ

7.4. **ಗಿಣಿ**

ಅಮ್ಮ ಅಮ್ಮ ಬಾರಮ್ಮ, ಗಿಣಿಯೊಂದು ಬಂದಿದೆ ನೋಡಮ್ಮ

ಹಸಿರು ಬಣ್ಣದ ಗಿಣಿಯಮ್ಮ, ಕೆಂಪು ಕೊಕ್ಕಿನ ಗಿಣಿಯಮ್ಮ

ಅಮ್ಮ ಅಮ್ಮ ಬಾರಮ್ಮ...

ಹಾರಲು ರೆಕ್ಕೆ ಇದಿಯಮ್ಮ, ತಿನ್ನಲು ಕೊಕ್ಕ ಇದೆಯಮ್ಮ

ಅಮ್ಮ ಅಮ್ಮ ಬಾರಮ್ಮ...

ಗಿಣಿಯನ್ನು ಹಿಡಿದು ತಾರಮ್ಮ ಮುದ್ದಾದ ನುಡಿಗಳು ಕಲಿಸುವೆನಮ್ಮ...

ಅಮ್ಮ ಅಮ್ಮ ಬಾರಮ್ಮ...

7.5. **ಗಿಳಿಯೇ**

ಗಿಳಿಯೇ ಗಿಳಿಯೇ ನೀ ಕೆಳಗೆ ಇಳಿಯೇ

ಮಾವಿನ ಮರದಿಂದ ಬಾಬಾ ಬಳಗೆ

ಪಂಜರದೊಳಗೆ ನೀನಿರುವುದೇ ಚಂದ

ಹಣ್ಣು ಕಡಲೆಕಾಯಿ ಕೊಡುವೆನು ನಿನಗೆ ನಾನು

ಏತಕೆ ಸೊರಗಿ ಸಪ್ಪಗಿರುವೆ ನೀನು

7.6. **ನನ್ನಯ ಗಿಳಿಯೇ**

ನನ್ನಯ ಗಿಳಿಯೇ

ಬಣ್ಣದ ಗಿಳಿಯೇ

ಹಸಿರು ಬಣ್ಣದ ಚಂದದ ಗಿಳಿಯೇ

ಕೆಂಪು ಕೊಕ್ಕಿನ ಅಂದದ ಗಿಳಿಯೇ

ಹಣ್ಣನು ತಿನ್ನುವ ಚಂದದ ಗಿಳಿಯೇ

ಮುದ್ದಾಗಿ ಕಾಣುವ ಅಂದದ ಗಿಳಿಯೇ


ಮುದವ ನೀಡುವ ಚಂದದ ಗಿಳಿಯೇ

7.7. <u>ಗುಬ್ಬಚ್ಚಿ</u>

ಬಾರೋ ಬಾರೋ ಗುಬ್ಬಚ್ಚಿ
ನಿನಗೆ ಕೊಡುವೆ ಅಪ್ಪಚ್ಚಿ
ಅಮ್ಮನು ಮಾಡಿದ ಅಪ್ಪಚ್ಚಿ
ಅಪ್ಪಚ್ಚಿ ತಿಂದು ರೆಕ್ಕೆಯ ಬಿಚ್ಚಿ
ಪುರ್ ಎಂದು ಹಾರೋ ಗುಬ್ಬಚ್ಚಿ

7.8. <u>ಬಾ ಬಾ ಗುಬ್ಬಿ ಮರಿ</u>

ಬಾ ಬಾ ಗುಬ್ಬಿ ಮರಿ
ತಂದಿರುವೆ ಕಡ್ಲೇ ಪುರಿ
ಇಬ್ಬರು ತಿನ್ನೋಣ ಬಾ
ಅವಲಕ್ಕಿ ಹುರಿಗಾಳು
ತಂದಿರುವೆ ಸ್ವಲ್ಪ ಕಾಳು
ಇಬ್ಬರು ತಿನ್ನೋಣ ಬಾ
ಅಮ್ಮನ ಕೇಳುತ್ತೀನಿ
ಕೊಡದೆ ಇದ್ದರೆ ಅಳುತೀನಿ
ಹೇಗಾದರು ತರುತೀನಿ ಬಾ ಬಾ



7.9. <u>ಗುಬ್ಬಚ್ಚಿ</u>

ಬಾ ಬಾ ಗುಬ್ಬಚ್ಚಿ
ಬಣ್ಣ ಬಣ್ಣದ ಗುಬ್ಬಚ್ಚಿ
ಅಕ್ಕಿ ಕಾಳು ಹಾಕುವೆ
ಕುಕ್ಕಿ ಕುಕ್ಕಿ ತಿನ್ನುವೆ
ರೆಕ್ಕೆ ಬಿಚ್ಚಿ ಪುರ್ ಅಂತ ಹಾರುವೆ.

7.10. **ಕೊಕ್ಕರೆ**

ಕೊಕ್ಕರೆ ಕೊಕ್ಕರೆ ನನ್ನ ಕೈಗೆ ಸಿಕ್ಕರೆ
ಬಾಯಿ ತೆಗೆದು ನಕ್ಕರೆ
ನಾನು ಹಾಕುವೆ ಸಕ್ಕರೆ ।

7.11. **ಪುಟಾಣಿ ಹಕ್ಕಿ**

ಪುಟಾಣಿ ಹಕ್ಕಿ ಹಳದಿ ಕೊಕ್ಕು
ಹಾರಿ ಬಂತು ಕಿಟಕಿ ಹೊಕ್ಕು
ಹೇಳತು ಹೊಳಪಿನ ಕಣ್ಣನು ಬಿಟ್ಟು
ಮಲಗಿಹೆ ಇನ್ನು ನಾಚಿಕೆ ಬಿಟ್ಟು
ಕಿಟಿ ಕಿಟಿ ಎಲ್ಲೈ ಕಿಟ್ಟಿ
ನನ್ನನು ನೋಡಿ ಕಲಿಯೇ ಕಿಟ್ಟಿ

7.12. **ತಾರೆ ರಾಣಿ**

ಓಹೋ ಓಹೋ ತಾರೆ ರಾಣಿ ಓಡಿಬಾರೆ
ನೀ ಜಿಗಿದು ಬಾರೇ, ಹಕ್ಕಿಯ ಹಾಗೆ ಹಾರೋಣ
ನವಿಲಿನ ತರ ಕುಣಿಯೋಣ, ಲಂಗ ಚಪಲ್ ಹಾಕೋಣ
ಕನ್ನಡಿ ಗಿನ್ನಡಿ ನೋಡೋಣ, ಅಂದ ಚಂದ ಕಾಣೋಣ
ಓಹೋ ಓಹೋ...

7.13. **ಪಕ್ಷಿಗಳು**

ಮರದ ಮರೆಯಲ್ಲಿ ಕುಳಿತು ಕೋಗಿಲೆ
ಕೂಗುವುದು ನೀ ಕೇಳು ಬಾ
ಬೆಟ್ಟದಡಿ ಮೋಡ ನೋಡುತಾ ಕುಣಿವ ನವಿಲ ನೋಡು ಬಾ
ಅಮ್ಮನ ಮಡಿಲಲ್ಲಿ ಕಾಳು ತಿನ್ನುತಾ ನಲಿವ ಗುಬ್ಬಿಯ ನೀ ನೋಡು ಬಾ
ಮರದಲ್ಲಿರುವ ಹಣ್ಣು ತಿಂದು ಹಾರುವ ಗಿಳಿಯ ಕೂಡಿ ಹಾರುವ ನೀ ಓಡಿ ಬಾ ।

## 7.14. ಕಾಗೆ

ಕಾಗೆ ಕಾಗೆ ಕವ್ವಾ

ಯಾರು ಬಂದಾರವ್ವಾ

ಮಾವಾ ಬಂದನವ್ವಾ

ಏನ್ ತಂದನವ್ವಾ

ಸ್ಲೇಟು ಬಳಪ ತಂದನು

ಅ ಆ ಇ ಈ ಬರೆದನು

## 7.15. ಕರ್‍ರಗಿರುವ ಕಾಗೆಯೊಂದು

ಕರ್‍ರಗಿರುವ ಕಾಗೆಯೊಂದು

ಸರ್ ಎಂದು ಮೇಲೆ ಹಾರಿ

ಗಿರ್ ಎಂದು ಸುತ್ತಿ ತಿರುಗಿ

ಕೆಳಗೆ ಜಾರಿತು, ಕರ್ ಎಂದು ಕೂಗಿಕೊಂಡಿತು

ಸರ್ ಎಂದು ಜಾರುವಾಗ

ಪರ್ ಎಂದು ಅದರ ರೆಕ್ಕೆ ಹರಿದು ಹೋಯಿತು

## 7.16. ಒಂದು ಕಾಗೆ


ಒಂದು ಕಾಗೆ ಬಂದೀತು

ಎರಡು ಕಾಳು ತಂದೀತು

ಮೂರು ಮೊಟ್ಟೆ ಇಟ್ಟೀತು

ನಾಲ್ಕು ಸಲ ಕೂಗೀತು

ಐದು ಸಲ ಹಾರೀತು



**7.17. ಕುಹು ಕುಹು ಕೋಗಿಲೆ**

ಕುಹು ಕುಹು ಕೋಗಿಲೇ
ಇಂಪಾಗಿ ಹಾಡೆಲೇ
ಮುದ್ದು ಮುದ್ದು ಕೋಗಿಲೇ
ಹಾಡು ನೀನು ಈಗಲೇ
ಮರಗಿಡಗಳ ಮರೆಯಲ್ಲಿ
ಕಾಗೆ ಕಂಡ ಬಯದಲ್ಲಿ
ಎದೆ ಢವ ಢವ ಎನ್ನದೇ?
ಹಾಡು ಹಾಡು ಬಾರೆಲೇ
ನನ್ನ ಹತ್ತಿರ ಕೋಗಿಲೆ
ಕುಹು ಕುಹು ಕೋಗಿಲೆ


**7.18. ಕೋಗಿಲೆ**

ಕುಹೂ ಕುಹೂ ಕೋಗಿಲೆ
ನೀನು ಬಂದು ಹಾಡೆಲೆ
ನಿನ್ನ ಹಾಡ ಕಲಿಯುವೆ
ಕುಣಿದು ಕುಣಿದು ಹಾರುವೆ

**7.19. ಕೊ ಕೋ ಕೋಳಿ**

ಕೊ ಕೋ ಕೋಳೀ
ಬೆಳಗಾಯಿತು ಏಳೀ
ಅಂಬ ಅಂಬ ಕರುವೆ
ಹಾಲನು ಕುಡಿಯಲು ಬರುವೆ
ಮಿಯಾವ್ ಮಿಯಾವ್ ಬೆಕ್ಕೆ
ಕದ್ದು ಹಾಲು ನೆಕ್ಕೆ
ಚೀವ್ ಚೀವ್ ಇಲಿಯೇ, ಮಹಡಿಯಿಂದ ಇಳಿಯೇ
ಕಾವ್ ಕಾವ್ ಕಾಗೆ, ನಿನ್ನ ರೆಕ್ಕೆ ಹೀಗೆ,
ಬೌ ಬೌ ನಾಯಿ ಸಾಕು ಮುಚ್ಚು ಬಾಯಿ

### 7.20. <u>ಕೋಳಿ</u>



ಮೇಲೆ ಕೆಳಗೆ ಹಾರಾಡಿ
ಹೀಗೇ ಹಾಗೇ ತುರಾಡಿ
ಕೆಂಪು ಟೋಪಿ ಹಾರಾಡಿ
ಕೂಗುವೇ ಏನು ಎಲೈ ಕೋಳಿ
ಕೊಕ್ಕೊ ಕೊಕ್ಕೊ ಕೊಕ್ಕೊ
ಹಳ್ಳಿಯಲ್ಲಾ ರಂಗಾಯ್ತು
ಏಳಿ ಏಳಿ ಎದ್ದೇಳಿ
ಬೆಳಂ ಬೆಳಕು ಹೀಗಾಯ್ತು
ಹುಂಜ ಹಳ್ಳಿಯ ಗಡಿಯಾರ
ಹುಂಜ ಹಳ್ಳಿಯ ಗಡಿಯಾರ...

### 7.21. <u>ನವಿಲೆ</u>

ಚಿಕ್ಕ ಚಿಕ್ಕ ನವಿಲೆ
ಪುಟ್ಟ ಪುಟ್ಟ ನವಿಲೆ
ಎಲ್ಲಿಗೆ ಹೊರಟಿರುವೆ
ಅಂದ ಚೆಂದ ಕುಣಿಯುತ್ತ
ಬಳಕುತ್ತಾ ಬಳಕುತ್ತಾ
ಯಾರನ್ನು ಹುಡುಕಿರುವೇ
ಮಳೆಗಾಲ ಬಂದಾಗ ಮಳೆಯನ್ನು ಕಂಡಾಗ
ರೆಕ್ಕೆ ಬಿಚ್ಚಿ ಕುಣಿದಾಡುವೆ

### 7.22. <u>ನವಿಲೆ</u>

ಚಂದದ ನವಿಲೆ, ಅಂದದ ನವಿಲೆ

ಓಡುವೆ ಏಕೆ ಬಾ ಬಾ

ಸುಂದರ ನವಿಲೆ, ಬಣ್ಣದ ನವಿಲೆ

ಆಡಲು ಹತ್ತಿರ ಬಾ ಬಾ

ಗರಿಗಳ ಬಿಚ್ಚಿ ಥಕ ಥಕ ಕುಣಿದು


ನಾಟ್ಯವನಾಡು ಬಾ ಬಾ

ಕುಣಿಯಲು ನೀನು ಸಂತಸಗೊಂಡು

ಮಳೆಯು ಸುರಿಯಲಿ ಬಾ ಬಾ

ನೆಗೆಯುತ ಜಿಗಿಯುತ, ಹತ್ತಿರ ಸುಳಿಯುತ

ದೂರ ಓಡದೆ ಬಾ ಬಾ



## ೮. ತಿಂಡಿಗಳು

### ೮.1. ಕಡ್ಲೆಪುರಿ

ಮರಿ ಮರಿ ಬಾ ಇಲ್ಲಿ

ಕೊಬ್ಬರಿ ತುರಿ ತುರಿ

ಮೆಣಸಿನಕಾಯಿ ಮುರಿ ಮುರಿ

ಕಡ್ಲೆ ಹಾಕಿ ಹುರಿ ಹುರಿ

ಹುರಿದು ಮತ್ತೆ ನನ್ನ ಕರಿ

ತಿನ್ನುವ ಅದಕ್ಕೆ ಸೇರಿಸಿ ಕಡ್ಲೆಪುರಿ

### ೮.2. ಬೆಲ್ಲ-ಸಕ್ಕರೆ

ಬೆಲ್ಲ ತಿಂದು ಪುಟ್ಟ ಮಲ್ಲ

ಹಲ್ಲು ಕಳೆದು ಕೊಂಡನು

ಕಲ್ಲು ಸಕ್ಕರೆಯ ಕಂಡು

ಜೊಲ್ಲು ಸುರಿಸಿ ನಿಂದನು

### ೮.3. ಉಪ್ಪಿಟ್ಟು

ಬಾರೋ ಇಲ್ಲಿ ಹರಿ

ರವೆ ಸ್ವಲ್ಪ ಹುರಿ

ತೆಂಗಿನಕಾಯಿ ತುರಿ

ಮೆಣಸಿನಕಾಯಿ ಮುರಿ

ಒಗ್ಗರಣೆ ಹಾಕೋ ಮರಿ

ಉಪ್ಪಿಟ್ಟು ಮಾಡೋ ನನ್ನ ಹರಿ

### ೮.4. ನಮ್ಮ ಆಹಾರ

ಅನ್ನ ರೊಟ್ಟಿ ತಿಂದು ನಾನು ಗಟ್ಟಿಯಾಗುವೆ

ಬೇಳೆ ಕಾಳು ತಿನ್ನುವ ನಾನು ಉದ್ದ ಬೆಳೆಯುವೆ

ಬೆಣ್ಣೆ ತುಪ್ಪ ತಿನ್ನುವೆ ನಾನು ಆಟವಾಡುವೆ

ಬೆಲ್ಲದುಂಡೆ ತಿನ್ನುವೆ ನಾನು ಕುಣಿದು ಓಡುವೆ

## ೩.೫. ತಿಂಡಿಯ ರುಚಿ

ಚಪಾತಿ ಚಪ್ ಚಪ್

ಜಿಲೇಬಿ ಜುಂ ಜುಂ

ಹಪ್ಪಳ ಪಟ್ ಪಟ್

ಹಾಲು ಮೊಸರು ಗಟ್ ಗಟ್

ಮೊಸರನ್ನ ಉಪ್ಪಿನಕಾಯಿ ಲೊಟ್ ಲೊಟ್

## ೩.೬. ರವೆ ಉಂಡೆ

ರವೆ ಉಂಡೆ ರವೆ ಉಂಡೆ

ಡಬ್ಬಿಯಲ್ಲಿ ಕಂಡೆ

ಬಾಯಲ್ ಒಂದು ಹಾಕಿಕೊಂಡೆ

ಕೈಯಲ್ ಒಂದು ಹಿಡಿಕೊಂಡೆ

ಓಡ್ತಾ ಓಡ್ತಾ ಬಿದ್ದು ಕಾಲು ಮುರಕೊಂಡೆ

## ೩.೭. ಸಿಹಿ ತಿಂಡಿ

ಬೇಕೆ ಬೇಕೆ ಸಿಹಿ ತಿಂಡಿ

ರುಚಿ ರುಚಿಯಾದ ಸಿಹಿ ತಿಂಡಿ

ಗುಂಡಾಕಾರದ ಲಾಡು ಉಂಡೆ

ಚೌಕಾಕಾರದ ಬಾದಾಮಿ ಹಲ್ವ

ತ್ರಿಕೋಣ ಆಕಾರದ ಬಾದಾಮಿ ಪುರಿ

ಆಯತ ಆಕಾರದ ಮೈಸೂರ್ ಪಾಕು

ಬೇಕೆ ಬೇಕೆ ಸಿಹಿ ತಿಂಡಿ



## ೩.೮. ಮಿಠಾಯಿ ಮಿಠಾಯಿ

ಮಿಠಾಯಿ ಮಿಠಾಯಿ ಕೊಬ್ಬರಿ ಮಿಠಾಯಿ

ತಿನ್ನಲು ಬೇಕು ಸಿಹಿಯ ಮಿಠಾಯಿ

ಬಣ್ಣ ಬಣ್ಣದ ರುಚಿಯ ಮಿಠಾಯಿ

ಅಮ್ಮನು ಮಾಡಿದ ಒಳ್ಳೆಯ ಮಿಠಾಯಿ

ನನಗೆ ಸಾಕು ಎರಡು ಮಿಠಾಯಿ

ತಿನ್ನಲು ಇದು ಒಳ್ಳೆಯ ಮಿಠಾಯಿ

೮.೯. **<u>ಬೋರ್ನ್‌ವೀಟಾ</u>**

ಅಮ್ಮ ಅಮ್ಮ ಬೋರ್ನ್‌ವೀಟಾ

ಹಾಕಿಕೊಡು ಒಂದು ಲೋಟ

ನಾ ಕುಡಿವೆ ಗಟ ಗಟ

ಅಂಗನವಾಡಿಗೆ ಹೋಗುವೆ ಚಟಪಟ

೮.೧೦. **<u>ಅತ್ತರೆ–ಬಿದ್ದರೆ</u>**

ಹಾಲು ತುಪ್ಪ ಸಕ್ಕರೆ

ಸಿಗುವುದು ನಾನು ಅತ್ತರೆ

ಬಾಳೆಹಣ್ಣು ಸಕ್ಕರೆ

ಬರುವುದು ನಾನು ಬಿದ್ದರೆ

೮.೧೧. **<u>ದೋಸೆಯ</u>**

ದೋಸೆ ದೋಸೆ ತಿನ್ನಲು ನನಗೆ ಆಸೆ


ಮೂರು ಕಾಸಿನ ತುಪ್ಪದ ದೋಸೆ

ಅಕ್ಕನು ಮಾಡುವ ಅಕ್ಕಿಯ ದೋಸೆ

ಅಮ್ಮನು ಮಾಡುವ ಮಸಾಲೆ ದೋಸೆ

ಸಾವಿರ ಕಣ್ಣಿನ ಬಿಸಿ, ಬಿಸಿ ದೋಸೆ

ಎಲ್ಲಾ ಮಕ್ಕಳು ತಿನ್ನುವ ದೋಸೆ ॥ದೋಸೆ॥



೮.೧೨. **<u>ದೋಸೆ</u>**

ದೋಸೆ ದೋಸೆ ಅಮ್ಮ ಮಾಡಿದ ದೋಸೆ

ಅಕ್ಕಿಹಿಟ್ಟು ಉದ್ದಿನ ಹಿಟ್ಟು ಎರಡು ಕಲಸಿ ಸುಟ್ಟ ದೋಸೆ

ಅಪ್ಪನಿಗೆ ನಾಲ್ಕು, ಅಮ್ಮಗೆ ಮೂರು

ಅಣ್ಣನಿಗೆ ಎರಡು ನನಗೆ ಒಂದು

ಎಲ್ಲಾ ಒಟ್ಟು ಹತ್ತು

# ೯. ಹಣ್ಣುಗಳು ಮತ್ತು ತರಕಾರಿಗಳು

## ೯.೧. ತರಕಾರಿ

ಬೇಕೇ ಬೇಕೇ ತರಕಾರಿ

ತರ ತರ ಬಗೆಯ ತರಕಾರಿ

ಬೆರಳನು ಹೋಲುವ ಬೆಂಡೆಕಾಯಿ

ಹಾವನು ಹೋಲುವ ಪಡವಲಕಾಯಿ

ಕೊಳಲನು ಹೋಲುವ ಉದ್ದ ಉದ್ದ ನುಗ್ಗೆಕಾಯಿ

ಕುಳ್ಳಾಗಿರೋ ಈರುಳ್ಳಿ

ಗೋಲಾಕಾರದ ನಿಂಬೆಕಾಯಿ

ನೀರನು ಕುಡಿಸುವ ಮೆಣಸಿನಕಾಯಿ

ಬಜ್ಜಿಗೆ ತಕ್ಕ ಬದನೆಕಾಯಿ

ಒರಟು ಚರ್ಮದ ಹಾಗಲಕಾಯಿ

ಗೆರೆಗಳು ಇರುವ ಹೀರೇಕಾಯಿ

ಬೇಕೇ ಬೇಕೇ ತರಕಾರಿ

ತರ ತರ ಊಟಕೆ ರುಚಿಕಾರಿ!

## ೯.೨. ತರಕಾರಿ ತಿನ್ನಿರಿ

ಬನ್ನಿ ಬನ್ನಿ ಮಕ್ಕಳೇ ಕಾಯಿಪಲ್ಲೆ ತಿನ್ನಿರಿ

ಸೊಪ್ಪು ಪಲ್ಯ ತಿನ್ನಿರಿ ರಕ್ತವನ್ನು ಹೆಚ್ಚಿಸಿರಿ

ಗಜ್ಜರಿ ಗೆಡ್ಡೆ ತಿನ್ನಿರಿ ಕಣ್ಣದೃಷ್ಟಿ ಬೆಳೆಸಿರಿ

ಮೂಲಂಗಿ ಈರುಳ್ಳಿ ತಿನ್ನಿರಿ ಎಲಬು ಗಟ್ಟಿ ಮಾಡಿರಿ

ನೆಲ್ಲಿಕಾಯಿ ತಿನ್ನಿರಿ ಹಲ್ಲುಗಟ್ಟಿ ಮಾಡಿರಿ

ತರಹ ತರಹ ಪಲ್ಯ ಸೇವಿಸಿ


ಒಳ್ಳೆ ಆರೋಗ್ಯ ಪಡೆಯಿರಿ

## 9.3. <u>ಗೆಣಸು</u>

ಅಮ್ಮ ಅಮ್ಮ ಗೆಣಸು
ಮೇಲಿನ ಸಿಪ್ಪೆ ತೆಗೆಸು
ಹಾಲು ತುಪ್ಪ ಕಲಸು
ಹೊಸ ಅಂಗಿ ತೊಡಿಸು
ಅಂಗನವಾಡಿಕೆ ಕಳಿಸು

## 9.4. <u>ಯಾಕೋ ಗೊತ್ತಿಲ್ಲಾ</u>

ನಮ್ಮ ಅಮ್ಮ ಕುಂಬಳಕಾಯಿ
ನಮ್ಮ ಅಪ್ಪ ಬದನೆಕಾಯಿ
ನಾನು ಮಾತ್ರ ಮೆಣಸಿನಕಾಯಿ
ಯಾಕೋ ಗೊತ್ತಿಲ್ಲಾ ಯಾಕೋ ಗೊತ್ತಿಲ್ಲಾ
ನನ್ನ ತಂಗಿ ಟೊಮೊಟೊ ಹಣ್ಣು
ನನ್ನ ತಮ್ಮ ಸೀಬೆಹಣ್ಣು
ನನ್ನ ಅಣ್ಣ ನುಗ್ಗೆಕಾಯಿ
ನನ್ನ ಅಕ್ಕ ಬೆಂಡೆಕಾಯಿ
ನಾನು ಮಾತ್ರ ಮೆಣಸಿನಕಾಯಿ, ಯಾಕೋ ಗೊತ್ತಿಲ್ಲಾ ॥2॥



9.5. **ಹಣ್ಣು ಹಣ್ಣು**

ಹಣ್ಣು ಹಣ್ಣು ಮಾವಿನ ಹಣ್ಣು
ಮಕ್ಕಳ ಬಾಯಿಗೆ ಸೀಬೆಹಣ್ಣು
ಹೆತ್ತವರ ಬಾಯಿಗೆ ಹಲಸಿನ ಹಣ್ಣು
ಮುದುಕರ ಬಾಯಿಗೆ ಬಾಳೆಹಣ್ಣು
ಕಣ್ಣು ಮುಚ್ಚು ಬಾಯಿ ಬಿಚ್ಚು
ಹಾಕುವೆ ನಾನು ದ್ರಾಕ್ಷಿ ಹಣ್ಣು

9.6. **ಹಣ್ಣು**

ಹಳದಿ ಬಣ್ಣದ ಬಾಳೆ ಹಣ್ಣು
ಕೆಂಪು ಬಣ್ಣದ ಸೇಬುಹಣ್ಣು
ಕೇಸರಿ ಬಣ್ಣದ ಕಿತ್ತಳೆ ಹಣ್ಣು
ಹಸಿರು ಬಣ್ಣದ ಸೀಬೆಹಣ್ಣು
ನೇರಳೆ ಬಣ್ಣದ ನೇರಳೆ ಹಣ್ಣು
ಕಂದು ಬಣ್ಣದ ಸಪೋಟ ಹಣ್ಣು
ಕಪ್ಪು ಬಣ್ಣದ ದ್ರಾಕ್ಷಿ ಹಣ್ಣು
ನನಗೆ ಇಷ್ಟ ಎಲ್ಲಾ ಹಣ್ಣು

9.7. **ಬೀಜ–ಹಣ್ಣು**

ಒಂದು ಬೀಜ ತಂದೆನು
ಬೀಜವನು ಹೂತೆನು
ಬೀಜ ಮೊಳಕೆಯಾಯಿತು
ಮೊಳಕೆ ಗಿಡವು ಆಯಿತು
ಗಿಡವು ಹೂ ಬಿಟ್ಟಿತು
ಹೂವು ಕಾಯಿ ಆಯಿತು
ಕಾಯಿ ಹಣ್ಣು ಆಯಿತು
ಅದನು ನಾನು ತಿಂದೆನು

## ೯.೮. <u>ಮಾವಿನ ತೋಟ</u>

ತೋಟದಿ ಮಾವಿನ ಮರವಿಹುದು

ಅದರ ತುಂಬ ಎಲೆ ಇಹುದು

ತೋಟದಿ ಮಾವಿನ ಮರವಿಹುದು

ಅದರ ತುಂಬ ಹಣ್ಣಿಹುದು

ಅದರ ಹಣ್ಣು ರುಚಿ ಇಹುದು

## ೯.೯. <u>ಪಪ್ಪಾಯಿ ಹಣ್ಣು</u>

ಹಣ್ಣು ಹಣ್ಣು ಪಪ್ಪಾಯಿ ಹಣ್ಣು

ಹಳದಿ ಬಣ್ಣದ ಪಪ್ಪಾಯಿ ಹಣ್ಣು

ತಿನ್ನಲು ಬಲುರುಚಿ ಪಪ್ಪಾಯಿ ಹಣ್ಣು

ಕಣ್ಣಿಗೆ ಕಾಂತಿ ನೀಡುವ ಹಣ್ಣು



# 10.ವಾಹನಗಳು


## 10.1. ವಾಹನಗಳ

ಸೈಕಲ್ ಬಂತ್ತು ಸೈಕಲ್,
ಅದರ ಗಂಟಿ ಟ್ರಿಣ್ ಟ್ರಿಣ್ ಟ್ರಿಣ್
ಬಸ್ಸು ಬಂತ್ತು ಬಸ್ಸು
ಅದರ ಶಬ್ದ ಬುರ್ ಬುರ್ ಬುರ್
ಗಾಡಿ ಬಂತ್ತು ಗಾಡಿ,
ಅದರ ಶಬ್ದ ಫದ್ ಫದ್ ಫದ್
ರೈಲು ಬಂತ್ತು ರೈಲು
ಅದರ ಶಬ್ದ ಚುಕ್ ಬುಕ್ ಚುಕ್ ಬುಕ್




## 10.2. ಬಸ್ಸು

ಬಸ್ಸು ಬಂತು ಬಸ್ಸು
ಗವರ್ನ್‌ಮೆಂಟ್ ಬಸ್ಸು
ಕೆಂಪು ಬಿಳಿ ಬಣ್ಣ
ನೋಡು ಬಾರಣ್ಣ ।
ಆರು ಚಕ್ರ ಇರುವುದು
ಎರಡು ಲೈಟು ಉರಿಯುವುದು
ನಾನು ಕಂಡಕ್ಟರ್ ಆಗುವೆ
ರೈಟ್ ರೈಟ್ ಹೇಳುವೆ
ಸೀಟಿಯನ್ನು ಊದುವೆ
ನಾನು ಡ್ರೈವರ್ ಆಗುವೆ
ಬಸ್ಸನ್ನು ಬಿಡುವೆ




### 10.3. <u>ಲಾರಿ</u>



ಲಾರಿ ಬಂತು ಲಾರಿ
ಪೊಂ ಪೊಂ ಲಾರಿ
ಅಕ್ಕಿ ಮೂಟೆ ಲಾರಿ
ಬುರ್ ಎಂದು ಜಾರಿ
ಊರೊಂದು ಸೇರಿ

### 10.4. <u>ದೋಣಿ</u>

ದೋಣಿ ದೋಣಿ ದೋಣಿ
ಕೆರೆಯ ಮೇಲೆ ದೋಣಿ
ನದಿಯ ಮೇಲೆ ದೋಣೀ
ಸಮುದ್ರದಲ್ಲಿ ದೋಣಿ
ಮೇಲೆ ನೋಡಿ ಆಕಾಶ
ಕೆಳಗೆ ನೋಡಿ ಭೂಮಿ
ಮಧ್ಯದಲ್ಲಿ ನೀರು
ನೀರಿನಲ್ಲಿ ಮೀನು



### 10.5. <u>ದೋಣಿ</u>

ಮೇಲೆ ಮೇಲೆ ಆಕಾಶ
ಕೆಳಗೆ ಕೆಳಗೆ ಭೂಮಿ
ಮಧ್ಯದಲ್ಲಿ ನೀರು
ನೀರಿನಲ್ಲಿ ದೋಣಿ
ದೋಣಿಯಲ್ಲಿ ನಾನು
ದೋಣಿಯಲ್ಲಿ ನೀನು
ಹೊಯ್ಯರೆ ಹೊಯ್ಯರೆ

## 10.6. ಬರುತಿದೆ ರೈಲು

ಬರುತಿದೆ ಬರುತಿದೆ ರೈಲು
ಹಳಿಗಳ ಮೇಲೆ ಚುಕು ಚುಕು ರೈಲು
ಜನಗಳು ತುಂಬಿದ ಅಂದದ ರೈಲು
ಹೊಗೆಯನು ಉಗುಳುವ ಉದ್ದದ ರೈಲು
ಮಕ್ಕಳು ಮೆಚ್ಚುವ ಚಂದದ ರೈಲು
ಮಕ್ಕಳ ಪ್ರೀತಿಯ ಚುಕು ಚುಕು ರೈಲು



## 10.7. ವಿಮಾನ

ಬಂತು ಬಂತು ವಿಮಾನ
ಯಾರು ಇದರ ಸಮಾನ
ಬಾನ ಬಯಲ ಯಾನ
ಮಾಡಿ ಬುರ್ ಬುರ್ ಗಾನ
ನೆಲವ ಬಿಟ್ಟು ಏರುತ್ತಾ
ಮೇಲೆ ಮೇಲೆ ಸಾಗುತ್ತಾ
ಮೋಡದೊಳಗೆ ಹೋಗುತ್ತಾ
ಜನರ ಹೊತ್ತು ಮೇಲಕ್ಕೆ
ಹೋಗುತಿಹುದು ದೂರಕ್ಕೆ
ದೂರದೊಂದು ದೇಶಕ್ಕೆ
ನಿಮಿಷದಿಂದ ನಿಮಿಷಕ್ಕೆ

10.8. <u>ವಿಮಾನ-ನೊಣ</u>

ಅಲ್ಲಿ ನೋಡು ಆಕಾಶ


ಆಕಾಶದಲ್ಲಿ ವಿಮಾನ

ವಿಮಾನದಲ್ಲಿ ಅಜ್ಜಿ

ಅಜ್ಜಿ ಕೈಯಲ್ಲಿ ತಟ್ಟೆ

ತಟ್ಟೆಯಲ್ಲಿ ಲಡ್ಡು

ಲಡ್ಡುವಿನಲ್ಲಿ ನೊಣ



## 11. ಆಟಗಳು

### 11.1. ರಥೊ ರಥೊ

ರಥೊ ರಥೊ ರಾಯನ ಮಗಳೆ

ಬಿತ್ತೊ ಬಿತ್ತೊ ಭೀಮನ ಮಗಳೆ

ಹದಿನಾರೆಮ್ಮೆ ಕರೆಯಲಾರೆ ಕಾಸಲಾರೆ

ಕಡೆಯಲಾರೆ ಬೈಟುಗುಬ್ಬಿ–ಬಾಳೆಕಂಬ

ಕುಕ್ಕರ ಬಸವಿ ಕೂರ ಬಸವಿ

### 11.2. ಕಣ್ಣಾಮುಚ್ಚೆ

ಕಣ್ಣಾಮುಚ್ಚೆ ಕಾಡೆಗೂಡೆ

ಉದ್ದಿನ ಮೂಟೆ ಉರುಳ್ಳೆ ಹೋಯ್ತು

ನಮ್ಮಯ ಹಕ್ಕಿ ಬಿಟ್ಟೆ ಬಿಟ್ಟೆ

ನಿಮ್ಮಯ ಹಕ್ಕಿ ಬಚ್ಚಿಟ್ಟುಕೊಳ್ಳಿ

### 11.3. ಆಟ ಆಡು

ಆಡು ಆಡು ಆಟ ಆಡು

ಚಿಣ್ಣಿ ದಾಂಡು ಆಟ ಆಡು

ಗೋಲಿ ಬುಗುರಿ ಆಟ ಆಡು

ಬಣ್ಣದ ಬುಗುರಿ ಆಟ ಆಡು

ಅಪ್ಪಳೆ ತಿಪ್ಪಾಳೆ ಆಟ ಆಡು

ಕಣ್ಣಾ ಮುಚ್ಚಾಲೆ ಆಟ ಆಡು

ಉಪ್ಪು ಮೂಟೆ ಆಟ ಆಡು

ಕಪ್ಪೆಗೂಡಿನ ಆಟ ಆಡು

ಗೆಳೆಯರ ಜೊತೆಗೂಡಿ ಆಟ ಆಡು

### 11.4. <u>ಗಾಳಿಪಟ</u>

ಗಾಳಿಪಟ ಗಾಳಿಪಟ

ಅಗೋ ನೋಡು ಗಾಳಿಪಟ

ಬಣ್ಣ ಬಣ್ಣದ ಗಾಳಿಪಟ

ಬಾಲಂಗೋಚಿಯ ಗಾಳಿಪಟ

ಪಟ ಪಟ ಹಾರುವ ಗಾಳಿಪಟ

ಸರ್ರನೆ ಇಳಿಯುವ ಗಾಳಿಪಟ


### 11.5. <u>ಗಾಳಿಪಟ</u>

ಅಣ್ಣನು ಮಾಡಿದ ಗಾಳಿಪಟ

ಬಣ್ಣದ ಹಾಳೆಯ ಗಾಳಿಪಟ

ನೀಲಿಯ ಬಾನಲಿ ತೇಲುವ ಸುಂದರ

ಬಾಲಂಗೋಚಿಯ ನನ್ನ ಪಟ ।



### 11.6. <u>ಅಗೋ ನೋಡು ಗಾಳಿಪಟ</u>

ಅಗೋ ನೋಡು ಅಗೋ ನೋಡು

ಗಾಳಿಪಟ ಹಾರುತಿದೆ

ಮೇಲೆ ಮೇಲೆ ಏರುತಿದೆ

ಮುಂದೆ ಮುಂದೆ ಸಾಗುತಿದೆ

ಹಕ್ಕಿಯಂತೆ ಹಾರುತಿದೆ

ಲಾಗ ಹಾಕಿ ಬೀಳುತಿದೆ

ಮತ್ತೆ ಮತ್ತೆ ಏರುತಿದೆ

ಅಗೋ ನೋಡು ಅಗೋ ನೋಡು

ಗಾಳಿಪಟ ಹಾರುತಿದೆ


## 11.7. ಬುಗುರಿ

ನನ್ನಯ ಬುಗುರಿ ಬಣ್ಣದ ಬುಗುರಿ
ಗುರು ಗುರು ಸದ್ದನು ಮಾಡುವ ಬುಗುರಿ
ದಾರವ ಸುತ್ತಿ ಕೈಯನು ಎತ್ತಿ
ಬೀಸಲು ಬರದಿ ಸುತ್ತುವ ಬುಗುರಿ



## 11.8. ಜಾರೋ ಬಂಡಿ

ಜಾರೋ ಬಂಡಿ ಆಟ, ಜಾರಿ ಬೀಳೊ ಆಟ
ಆಡುತ್ತಿದ್ದ ರಾಮನ್ನ, ಜಾರಿ ಬಿದ್ದ ನೋಡಣ್ಣ
ಹಲ್ಲು ಬಿತ್ತು ಚೂರಾಗಿ, ಬಾಯಿಯಲ್ಲಿ ಬಂತು ರಕ್ತ
ಕಣ್ಣಲ್ಲಿ ಬಂತು ನೀರು, ಆಡುತ್ತಿದ್ದ ಮಕ್ಕಳು ನೋಡಿ ನೋಡಿ ನಕ್ಕರು



## 12.ವೃತ್ತಿಗಳು

### 12.1. ಕುಂಬಾರ ಗುಂಡಯ್ಯ

ಕುಂಬಾರ ಗುಂಡಯ್ಯ, ಮಡಿವಾಳ ಮಾಚಯ್ಯ
ಒಂದು ಕಾಲೆತ್ತಿಕೊಂಡು, ಹೇಗೆ ತುಳಿದ?
ಹೀಗೆ ತುಳಿದ, ಥಕತೈ ಥಕತೈ, ಥಕತೈ ತೈ

### 12.2. ಕುಂಬಾರ



ನಾನು ಒಬ್ಬ ಕುಂಬಾರ
ಮಡಿಕೆ ಕುಡಿಕೆ ಹೊತ್ತುಕೊಂಡು
ಊರು ಸುತ್ತಿ ಮಾರುವೆ
ನಾನು ಒಬ್ಬ ಅಗಸ ಬಟ್ಟೆ ಗಿಟ್ಟೆ ಹೊತ್ತುಕೊಂಡು
ಕೆರೆಯ ಬಳಿಗೆ ಹೋಗುವೆ.
ನಾನು ಒಬ್ಬ ರೈತ ಹೊಲ ಊಳಿ
ಬೆಳೆ ಬಿತ್ತಿ ಧವಸ ಧಾನ್ಯ ಬೆಳೆಯುವೆ

### 12.3. ಡಾಕ್ಟರ್ ಮಾಮ




ಮಾ ಮಾ ಬರ್ತಾರೆ, ಡಾಕ್ಟರ್ ಮಾಮ ಬರ್ತಾರೆ
ಸಿಹಿ ಗುಳಿಗೆ ತರ್ತಾರೆ ಬಾಯಲ್ಲೊಂದು ಹಾಕ್ತಾರೆ
ಕೆನ್ನೆಗೆ ಮುತ್ತು ಕೊಡ್ತಾರೆ ಬೈ ಬೈ ಅಂತಾರೆ

### 12.4. ಡಾಕ್ಟರ್

ನಾನು ಡಾಕ್ಟರ್ ಆಗುವೆ, ರೋಗಿಯನ್ನು ಪರೀಕ್ಷಿಸುವೆ
ಜ್ವರವನ್ನು ಅಳೆಯುವೆ, ಇಂಜಕ್ಷನ್ನು ಕೊಡುವೆ
ಔಷಧಿಯನ್ನು ನೀಡುವೆ, ಆರೋಗ್ಯ ಉತ್ತಮಗೊಳಿಸುವೆ

12.5. **<u>ಪಾಪ ಪಾಪ ಅಳಬೇಡ</u>**

ಪಾಪಾ ಪಾಪಾ ಅಳಬೇಡ

ಆಸ್ಪತ್ರೆಗೆ ಹೋಗಿ ಬರತೀನಿ

ಡಾಕ್ಟರ್ ಸಾಹೇಬರು ಬರತಾರ

ಟಾನಿಕ್ ಬಾಟಲಿ ತರತಾರ

ನರ್ಸ್ ಬಾಯಿ ತೆರಿತಾರ

ಸಿಹಿ ಗುಳಿಗಿ ಪೆಪ್ಪರಮೆಂಟ್ ತರತಾರ

12.6. **<u>ಕಾಗದ ಬಂದಿದೆ</u>**


ಕಾಗದ ಬಂದಿದೆ ವೇಗದಿ ಬನ್ನಿರಿ

ಕಾಗದ ಕೊಳ್ಳಿರಿ ಎನ್ನುವೆನು

ಸೊಬಗಿನ ಸುದ್ದಿಯ ಹೇಳುವೆ ನಿಮಗೆ

ವ್ಯಸನದ ವಾರ್ತೆಯ ತರುವೆನು ನಿಮಗೆ

ಕಾಗದ ಬಂದಿದೆ ಕಾಗದವು



12.7. **<u>ಅಂಚೆ ಅಣ್ಣ</u>**

ಅಂಚೆ ಅಣ್ಣ ಬಂದ ಬಂದ

ನನಗೆ ಏನು ತಂದ ತಂದ

ಅಂಚೆ ಅಣ್ಣ ಬಂದ ಬಂದ

ನನಗೆ ಕಾಗದ ತಂದ ತಂದ

ಅಂಚೆ ಅಣ್ಣ ಬಂದ ಬಂದ

ನಿನಗೆ ಏನು ತಂದ ತಂದ

ನನಗೆ ಪಾರ್ಸಲ್ ತಂದ ತಂದ

ಅಂಚೆ ಅಣ್ಣ ಬಂದ ಬಂದ

ನನಗೆ ಮನಿ ಆರ್ಡರ್ ತಂದ ತಂದ

## 12.8. <u>ಅಂಚೆ</u>

ನಾನು ಅಂಚೆ ಡ್ರೆಸ್ ಹಾಕಿಕೊಂಡು
ಹೆಗಲಲಿ ಬ್ಯಾಗು ಇಟ್ಟುಕೊಂಡು
ಕಾಗದ ಕೈಯಲಿ ಹಿಡಿದುಕೊಂಡು
ಎಲ್ಲರ ಮನೆಯ ಹುಡುಕಿಕೊಂಡು
ಅವರವರ ಪತ್ರ ಕೊಟ್ಟುಕೊಂಡು
ದೂರದಿ ಬಂದ ಹಣವ ತಂದು
ಬಾಗಿಲ ಸೇರಿ ಅವರನ್ನು ಕೂಗಿ
ಹಣವ ಅವರಿಗೆ ತಲುಪಿಸುವೆ

## 12.9. <u>ವೃತ್ತಿಯ ಆಟ</u>

ವೃತ್ತಿಯ ಆಟವ ಆಡೋಣ
ಚಂದದಿ ನಾವು ನಲಿಯೋಣ
ನಾನು ಕುಂಬಾರನಾಗುವೆ ನೀನು ಕಮ್ಮಾರನಾಗು
ಇಬ್ಬರು ಕೂಡಿ ಮಡಿಕೆ ಕುಡಿಕೆ ಕುಡುಗೋಲು ಕೂರಿಗೆ ಮಾಡೋಣ
ನಾನು ಮಾಸ್ತರನಾಗುವೆ ನೀನು ರೈತನಾಗು
ಇಬ್ಬರು ಕೂಡಿ ಶಾಲೆಯ ಕಲಿಸಿ ಕೃಷಿಯ ಮಾಡೋಣ
ನಾನು ಡಾಕ್ಟರನಾಗುವೆ ನೀನು ಅಂಚೆಯಣ್ಣನಾಗು
ಇಬ್ಬರೂ ಕೂಡಿ ರೋಗ ಕಳೆದು, ವಿಷಯವ ತಿಳಿಸೋಣ
ನಾನು ಬಡಗಿ ಆಗುವೆ ನೀನು ದರ್ಜಿ ಆಗು
ಇಬ್ಬರೂ ಕೂಡಿ ಗಾಡಿ ನೇಗಿಲ ಮಾಡಿ, ವಿವಿಧ ಬಟ್ಟೆ ಹೊಲಿಯೋಣ
ನಾನು ಡ್ರೈವರ್, ನೀನು ಕಂಡಕ್ಟರ್ ಆಗು
ಇಬ್ಬರೂ ಕೂಡಿ ಬಸ್ ನಡೆಸಿ ಟಿಕೆಟ್ ನೀಡಿ ಊರಿಗೆ ಹೋಗೋಣ
ವೃತ್ತಿಯ ಆಟವ ಆಡೋಣ
ಚಂದದಿ ನಾವು ಕಲಿಯೋಣ

## 12.10. **ಬೇಕಣ್ಣ ಬೇಕಣ್ಣ**

ಬೇಕಣ್ಣ ಬೇಕಣ್ಣ
ನಮ್ಮ ಹಳ್ಳಿಗೆ ಬೇಕಣ್ಣ
ಕುಂಬಾರಣ್ಣ–ಕಮ್ಮಾರಣ್ಣ
ಮಾಸ್ತರಪ್ಪ–ಪೋಸ್ಟಪ್ಪ
ರೈತಪ್ಪ–ಡಾಕ್ಟರಪ್ಪ
ಕುಂಬಾರಪ್ಪ ಕುಡಿಕೆಗೆ ಬೇಕು
ಕಮ್ಮಾರಪ್ಪ ಕಬ್ಬಿಣಕೆ
ಮಾಸ್ತರಪ್ಪ ಶಾಲೆ ಕಲಿಸಲು ಬೇಕು
ಪೋಸ್ಟಪ್ಪಬೇಕು ಕಾಗದ ಹಂಚಲು
ರೈತಪ್ಪ ಹೊಲಕ್ಕೆ–ಡಾಕ್ಟ್ರಪ್ಪ ಆರೋಗ್ಯಕ್ಕೆ
ಬೇಕಣ್ಣ ಬೇಕಣ್ಣ
ಇವರೆಲ್ಲಾ ಬೇಕಣ್ಣ

೦–೬ ವರ್ಷದ ಮಕ್ಕಳ ಬೆಳವಣಿಗೆ, ಮಾನಸಿಕ ಆರೋಗ್ಯ ಮತ್ತು ಸುರಕ್ಷತೆಯ ಸೇವಾ ಯೋಜನೆ, ಮಕ್ಕಳ ಮತ್ತು ಕಿಶೋರ ಮನೋವೈದ್ಯಕೀಯ ವಿಭಾಗ

ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ, ಹೊಸುರು ರಸ್ತೆ,
ಬೆಂಗಳೂರು – ೫೬೦೦೨೯

**Website: http://www.nimhanschildproject.in**

**Email: capnimhans@gmail.com**

ಸಹಯೋಗ:

ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ

ಬೆಂಬಲ:

**UNICEF**
**Website: www.unicef.in**